# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/157/ಸಾ.ಸ/2020-21

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 30-03-2021

**ಗೆ,**

***ಸಿಂಡಿಕೇಟ್ ಸದಸ್ಯರು,***
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು.

**ಮಾನ್ಯರೆ,**

**ವಿಷಯ:** ದಿನಾಂಕ 24-03-2021ರಂದು ಜರುಗಿದ 157ನೇ ಸಿಂಡಿಕೇಟ್ ಸಭೆಯ ನಡವಳಿಗಳು.

***

ದಿನಾಂಕ 24-03-2021ರಂದು ರಂದು ಬೆಳಿಗ್ಗೆ 11.00 ಗಂಟೆಗೆ, ಬೋರ್ಡ್ ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು-560 001, ಇಲ್ಲಿ ಜರುಗಿದ 157ನೇ ಸಿಂಡಿಕೇಟ್ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

K Jyothi 30/3/2021
ಕುಲಸಚಿವರು

ಲಗತ್ತು: ಮೇಲಿನಂತೆ.

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/157/ಸಾ.ಸ/2020-21

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 29-03-2021

**ದಿನಾಂಕ 24-03-2021 ರಂದು ಬೆಳಿಗ್ಗೆ 11.00 ಗಂಟೆಗೆ ಬೋರ್ಡ್ ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು-560 009, ಇಲ್ಲಿ ಜರುಗಿದ 157ನೇ ಸಿಂಡಿಕೇಟ್ ಸಭೆಯ ನಡವಳಿಗಳು.**

**ಹಾಜರಾದ ಸದಸ್ಯರು:**

| | | | |
|---|---|---|---|
| 1. | ಪ್ರೊ. ವೇಣುಗೋಪಾಲ್ ಕೆ.ಆರ್.<br>ಕುಲಪತಿಗಳು | - | ಸಭಾಧ್ಯಕ್ಷರು |
| 2. | ಡಾ॥ ಸುಧಾಕರ ಹೆಚ್ | - | ಸದಸ್ಯರು |
| 3. | ಶ್ರೀ ಎಂ. ಉದಯ ಕುಮಾರ್ | - | ಸದಸ್ಯರು |
| 4. | ಶ್ರೀಮತಿ ಪದ್ಮ ವಿ | - | ಸದಸ್ಯರು |
| 5. | ಶ್ರೀ ಹೆಚ್.ಆರ್. ಕುಮಾರಸ್ವಾಮಿ | - | ಸದಸ್ಯರು |
| 6. | ಶ್ರೀ ಜಯರಾಮ | - | ಸದಸ್ಯರು |
| 7. | ಡಾ॥ ವತ್ಸಲ ಎನ್ | - | ಸದಸ್ಯರು |
| 8. | ಡಾ॥ ಗೋವಿಂದರಾಜು | - | ಸದಸ್ಯರು |
| 9. | ಶ್ರೀ ಗೋಪಿನಾಥ್ | - | ಸದಸ್ಯರು |
| 10. | ಡಾ॥ ಎಂ.ವಿ. ಆಶಾ (ಆನ್-ಲೈನ್ ಮೂಲಕ) | - | ಸದಸ್ಯರು |
| 11. | ಶ್ರೀ ಪ್ರೇಮ್ ಸೋಹನ್ ಲಾಲ್ | - | ಸದಸ್ಯರು |
| 12. | ಪ್ರೊ. ಟಿ.ವಿ. ರಾಜು | - | ಸದಸ್ಯರು |
| 13. | ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ | - | ಸದಸ್ಯರು |
| 14. | ಪ್ರೊ. ಬಿ.ಸಿ. ಮೈಲಾರಪ್ಪ | - | ಸದಸ್ಯರು |
| 15. | ಪ್ರೊ. ಜೆ.ಟಿ. ದೇವರಾಜು,<br>ಕುಲಸಚಿವರು (ಮೌಲ್ಯಮಾಪನ) | - | ಸದಸ್ಯರು |
| 16. | ಶ್ರೀಮತಿ ಕೆ. ಜ್ಯೋತಿ, ಭಾ.ಆ.ಸೇ<br>ಕುಲಸಚಿವರು | - | ಸದಸ್ಯ ಕಾರ್ಯದರ್ಶಿ |

ಒಂದು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಕುಲಸಚಿವರು, ಅಧ್ಯಕ್ಷರನ್ನು ಹಾಗೂ ಸದಸ್ಯರನ್ನು ಸ್ವಾಗತಿಸಿ, ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಕುಲಪತಿಗಳನ್ನು/ಅಧ್ಯಕ್ಷರನ್ನು ಕೋರಿದರು.

ಕುಲಪತಿಗಳು, ಸದಸ್ಯರೆಲ್ಲರನ್ನು ಮತ್ತೊಮ್ಮೆ ಸ್ವಾಗತಿಸಿ, ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

## 156ನೇ ಸಿಂಡಿಕೇಟ್ ಸಭೆಯಲ್ಲಿ ಮುಂದೂಡಲ್ಪಟ್ಟ ವಿಷಯಗಳು



**ವಿಷಯ ಸಂಖ್ಯೆ 1:** ದಿನಾಂಕ 18.12.2020 ರಂದು ಜರುಗಿದ 155ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 05.01.2021 ರಂದು ನಡೆದ ಮುಂದೂಡಿದ 155ನೇ ಸಿಂಡಿಕೇಟ್ ಸಭೆಗಳ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 18.12.2020 ರಂದು ಜರುಗಿದ 155ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 05.01.2021 ರಂದು ನಡೆದ ಮುಂದೂಡಿದ 155ನೇ ಸಿಂಡಿಕೇಟ್ ಸಭೆಗಳ ನಡಾವಳಿಗಳನ್ನು ಕೆಳಕಂಡ ಮಾರ್ಪಾಟಿನೊಂದಿಗೆ ಸಿಂಡಿಕೇಟ್ ಅನುಮೋದಿಸಿ ಸ್ಥಿರೀಕರಿಸಿತು.

1. ಶ್ರೀ ಉದಯ ಕುಮಾರ್ ಎಂ, ಶ್ರೀ ಪ್ರೇಮ್ ಸೋಹನ್ ಲಾಲ್ ಮತ್ತು ಡಾ॥ ಸುಧಾಕರ ಹೆಚ್, ಇವರುಗಳು ದಿನಾಂಕ:15-01-2021ರಂದು ಪತ್ರವನ್ನು ನೀಡಿ, ದಿನಾಂಕ: 05-01-2021ರಂದು ನಡೆದ ಮುಂದೂಡಿದ 155ನೇ ಸಿಂಡಿಕೇಟ್ ಸಭೆಯಲ್ಲಿನ ವಿಷಯ ಸಂಖ್ಯೆ: 30ಕ್ಕೆ ಸಂಬಂಧಿಸಿದಂತೆ ಹಾಗೂ ಚರ್ಚಿಸಿದಂತೆ ದಿನಾಂಕ: 03-01-2021ರಂದು ಜ್ಞಾನಭಾರತಿ ಪೋಲಿಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ದೂರಿನಲ್ಲಿ 2018-2020ರ ವರೆಗೆ ತನಿಖೆ ಮಾಡಲು ತಿಳಿಸಲಾಗಿದೆ. ಆದರೆ, ನಡಾವಳಿಯಲ್ಲಿ 2018-2020 ಸಾಲಿನ ಬದಲಾಗಿ 2019-2020 ಸಾಲಿಗೆ ಎಂದು ಮುದ್ರಿತವಾಗಿರುತ್ತದೆ ಎಂದು ತಿಳಿಸಿ, ಇದನ್ನು ನಡಾವಳಿಯಲ್ಲಿ ತಿದ್ದುಪಡಿ ಮಾಡಲು ಕೋರಿರುವ ಕಾರಣ, ಸದರಿ ನಿರ್ಣಯದಲ್ಲಿ '2018-2020ನೇ ಸಾಲಿಗೆ' ಎಂಬುದರ ಬದಲಾಗಿ '2019-2020ನೇ ಸಾಲಿಗೆ' ಎಂದು ಮುದ್ರಿತವಾಗಿರುವುದನ್ನು '2018-2020ನೇ ಸಾಲಿಗೆ' ಎಂದು ಓದಿಕೊಳ್ಳತಕ್ಕದ್ದು.

2. ದಿನಾಂಕ: 05-01-2021ರಂದು ಜರುಗಿದ ಸಿಂಡಿಕೇಟ್ ಸಭೆಯ ಶೂನ್ಯವೇಳೆ ಚರ್ಚೆಯ ಕಂಡಿಕೆ 4ರಲ್ಲಿ (ಪುಟ ಸಂಖ್ಯೆ 7) ಸದಸ್ಯರಾದ ಡಾ॥ ಗೋವಿಂದರಾಜು ಅವರು ಮಾಡಿದ ಚರ್ಚೆಗಳನ್ನು ಕೆಳಕಂಡಂತೆ ಮಾರ್ಪಡಿಸಲಾಗಿದೆ:

| ಮುದ್ರಿತವಾಗಿರುವುದು | ಓದಿಕೊಳ್ಳಬೇಕಾಗಿರುವುದು |
|---|---|
| ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 28(2) ರನ್ವಯ ವರ್ಷದಲ್ಲಿ ಕನಿಷ್ಟ ಎಂಟು ಸಭೆ ನಡೆಸಬೇಕಾಗಿದೆ. ಆದರೆ, ಎಂಟು ಸಭೆ ನಡೆದಿರುವುದಿಲ್ಲವೆಂದು ತಿಳಿಸಿದರು ಹಾಗೂ ಪರಿನಿಯಮಾವಳಿಯ ಪ್ರಕಾರ ಪ್ರತಿ ತಿಂಗಳು ಸಭೆ ನಡೆಸಬೇಕಾಗಿತ್ತು. | ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 28(2) ರನ್ವಯ ವರ್ಷದಲ್ಲಿ ವಿಶೇಷ ಸಭೆಗಳನ್ನು ಹೊರತುಪಡಿಸಿ ಕನಿಷ್ಟ ಎಂಟು ಸಾಮಾನ್ಯ ಸಿಂಡಿಕೇಟ್ ಸಭೆಗಳನ್ನು ನಡೆಸಬೇಕಾಗಿದೆ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿಯ 5.1ರ ಪ್ರಕಾರ ಪ್ರತಿ ತಿಂಗಳಿಗೊಮ್ಮೆ ಸಾಮಾನ್ಯ ಸಿಂಡಿಕೇಟ್ ಸಭೆಗಳನ್ನು ನಡೆಸಬೇಕಾಗಿತ್ತು. ಆದರೆ ಈ ಸಭೆಯ ಸೇರಿ 6 ಸಿಂಡಿಕೇಟ್ ಸಭೆಗಳನ್ನು ಮಾತ್ರ ನಡೆಸಲಾಗಿದೆ. |
| ಅಧಿನಿಯಮದ ಪ್ರಕರಣ 24(7) | ಅಧಿನಿಯಮದ ಪ್ರಕರಣ 34(7) |
| ಉಪಸಮಿತಿಗಳ ಸಭೆ ನಡೆಸಿರುವುದಿಲ್ಲ | ವಿಶ್ವವಿದ್ಯಾಲಯ ರಚಿಸಿರುವ ಉಪಸಮಿತಿಗಳಲ್ಲಿ ಕೇಂದ್ರ ಖರೀದಿ, ಸಮಿತಿ , ವರ್ಕ್ಸ್ ಕಮಿಟಿ, ಹಣಕಾಸು ಸಮಿತಿಗಳನ್ನು ಬಿಟ್ಟರೆ ಇನ್ನುಳಿದ ಅಕಾಡೆಮಿಕ್ ಡೆವೆಲಪ್‌ಮೆಂಟ್ ಕಮಿಟಿ, ಕ್ಯಾಂಪಸ್ ಅಭಿವೃದ್ಧಿ ಸಮಿತಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ಮತ್ತು ಸುಧಾರಣಾ ಸಮಿತಿ, ಸಾಂಸ್ಕೃತಿಕ ಸಲಹಾ ಸಮಿತಿ, ವಿದ್ಯಾರ್ಥಿ ನಿಲಯಗಳ ಉಸ್ತುವಾರಿ ಸಮಿತಿ ಮುಂತಾದ ಸಮಿತಿಗಳಲ್ಲಿ ಕ್ಯಾಂಪಸ್ ಅಭಿವೃದ್ಧಿ ಸಮಿತಿಯ ಒಂದೇ ಒಂದು ಸಭೆ ಮಾತ್ರ ನಡೆದಿದೆ. ಇನ್ನುಳಿದ ಯಾವುದೇ ಉಪಸಮಿತಿಗಳ ಒಂದೇ ಒಂದು ಸಭೆಯನ್ನು ಸಹ ಮಾಡಿಲ್ಲ. |
| ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ವಿಭಾಗದಲ್ಲಿ ಅಗತ್ಯಕ್ಕಿಂತ ಹೆಚ್ಚುವರಿ ಬೋಧಕರನ್ನು ನೇಮಕ ಮಾಡಲಾಗಿದೆ. | ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ವಿಭಾಗದಲ್ಲಿ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚುವರಿ ಬೋಧಕರನ್ನು ನೇಮಕ ಮಾಡಲಾಗಿದೆ. |
| ತಾವು ವಿಶ್ವವಿದ್ಯಾಲಯವು ಬೇರೆ ಸಂಸ್ಥೆಗಳಿಗೆ ನೀಡಿರುವ ಜಮೀನಿನ ವಿವರಗಳನ್ನು ಬಯಸಿ ಪತ್ರ ಬರೆದರೂ ಉತ್ತರ ನೀಡಲು ಸುಮಾರು ನಾಲ್ಕು ತಿಂಗಳು ಅವಧಿಯನ್ನು ತೆಗೆದುಕೊಳ್ಳಲಾಗಿದೆ. | ತಾವುಗಳು ವಿಶ್ವವಿದ್ಯಾಲಯವು ಬೇರೆ ಸಂಸ್ಥೆಗಳಿಗೆ ನೀಡಿರುವ ಜಮೀನಿನ ವಿವರಗಳನ್ನು ಬಯಸಿ ಪತ್ರ ಬರೆದರೂ ಉತ್ತರ ನೀಡಲು ಸುಮಾರು ಎರಡರಿಂದ ಮೂರು ತಿಂಗಳೂ ಅವಧಿಯನ್ನು ತೆಗೆದುಕೊಳ್ಳಲಾಗಿದೆ. |
| – | ದಿನಾಂಕ:05-01-2021ರ ದಿನ ಪತ್ರಿಕೆಗಳಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ 2019ರ ಸೆಪ್ಟೆಂಬರ್ ಸ್ನಾತಕ ಪದವಿ ಪರೀಕ್ಷೆಯ 804 ಉತ್ತರ ಪತ್ರಿಕೆಗಳನ್ನು ತಿದ್ದಿರುವ ಬಗ್ಗೆ ಹಾಗೂ ವಿಶ್ವವಿದ್ಯಾಲಯದ 242 ಎಕರೆ ಜಮೀನನ್ನು ಒತ್ತುವರಿಯಾಗಿದೆಯೆಂದು ಪ್ರಕಟವಾಗಿದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. |

**ವಿಷಯ ಸಂಖ್ಯೆ 2:** ದಿನಾಂಕ 18.12.2020 ರಂದು ಜರುಗಿದ 155ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 05.01.2021 ರಂದು ನಡೆದ ಮುಂದೂಡಿದ 155ನೇ ಸಿಂಡಿಕೇಟ್ ಸಭೆಗಳ ನಡಾವಳಿಗಳನ್ನು ನಡಾವಳಿಗಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳು (ATR).

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 18.12.2020 ರಂದು ಜರುಗಿದ 155ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 05.01.2021 ರಂದು ನಡೆದ ಮುಂದೂಡಿದ 155ನೇ ಸಿಂಡಿಕೇಟ್ ಸಭೆಗಳ ನಡಾವಳಿಗಳನ್ನು ನಡಾವಳಿಗಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿ (ATR) ಗಳನ್ನು ಸಾಮಾನ್ಯ ಚರ್ಚೆಯಲ್ಲಿ ತೆಗೆದುಕೊಂಡ ನಿರ್ಣಯ ಹಾಗೂ ಮಾರ್ಪಾಡುಗಳೊಂದಿಗೆ ಸಿಂಡಿಕೇಟ್ ಅನುಮೋದಿಸಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ 3** ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀಮತಿ ಲಕ್ಷ್ಮಿನರಸಮ್ಮ ಇವರ ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರ ಎಂದು ಘೋಷಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀಮತಿ ಲಕ್ಷ್ಮಿನರಸಮ್ಮ, ಗ್ರೂಪ್ ಡಿ ನೌಕರರು, ಸಿಬ್ಬಂದಿ ವಿಭಾಗ-1, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಇವರ ಪರೀಕ್ಷಾರ್ಥ ಸೇವಾ ಅವಧಿಯು, ಕರ್ನಾಟಕ ನಾಗರೀಕ ಸೇವಾ (Probationary Period) ನಿಯಮ 1977(3) ಪ್ರಕಾರ ದಿನಾಂಕ: 02-09-2020ರಂದು ತೃಪ್ತಿಕರವಾಗಿ ಪೂರ್ಣಗೊಂಡಿದೆ ಎಂದು ಘೋಷಿಸಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ: 4** :ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀಮತಿ ಮೀನಾ ಕುಮಾರಿ. ಎನ್. ಇವರ ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರ ಎಂದು ಘೋಷಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀಮತಿ ಮೀನಾ ಕುಮಾರಿ ಎನ್., ಗ್ರೂಪ್ ಡಿ ನೌಕರರು, ಭೌತಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಇವರ ಪರೀಕ್ಷಾರ್ಥ ಸೇವಾ ಅವಧಿಯು, ಕರ್ನಾಟಕ ನಾಗರೀಕ ಸೇವಾ (Probationary

Period) ನಿಯಮ 1977(3) ಪ್ರಕಾರ ದಿನಾಂಕ:25-02-2020ರಂದು ತೃಪ್ತಿಕರವಾಗಿ ಪೂರ್ಣಗೊಂಡಿದೆ ಎಂದು ಘೋಷಿಸಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ: 5** : ದಿನಾಂಕ 12.10.2020 ರಂದು ಮಧ್ಯಾಹ್ನ 2.00 ಗಂಟೆಗೆ ಜರುಗಬೇಕಿದ್ದ 6ನೇ ಸೆಮಿಸ್ಟರ್ ಬಿ.ಕಾಂ 6.2 Principles and practice of Auditing ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ: 6**: ಡಾ. ಜೆ.ಟಿ. ದೇವರಾಜು, ಪ್ರಾಧ್ಯಾಪಕರು, ಎಲೆಕ್ಟ್ರಾನಿಕ್ಸ್ ಸೈನ್ಸ್ ವಿಭಾಗ, ಇವರನ್ನು ಬೆಂಗಳೂರು ವಿಶ್ವವಿದ್ಯಾಲಯ, ಕುಲಸಚಿವರು (ಮೌಲ್ಯಮಾಪನ) ಹುದ್ದೆಗೆ ನೇಮಕಾತಿ ಮಾಡಿರುವುದರಿಂದ ವಿಶ್ವವಿದ್ಯಾಲಯದ ಸೇವಾ ಷರತ್ತುಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157th meeting of the Syndicate held on 24.03.2021*

**Item No.7** Expiry of lien period –reg.

***Resolution:***

The Vice-Chancellor informed that, Dr. Sharath Ananthamurthy, was granted a lien for a period of one year from 11-09-2017 to 10-09-2018 vide University order dated: 09-09-2017 and permitted him to join as Professor at the University of Hyderabad. His lien period was further extended for one more year on his request with effect from 11-09-2018 to 10-09-2019.

He has not reported for duty in the University though communications were sent to him on 16-10-2019, 30-07-2020, 24-08-2020. However, he has sought extension of lien period vide letter dated: 09-09-2019 by quoting

some academic reasons at that time. Now he is requesting to consider his representation to re-join to the Department of Physics in the Bangalore University. He has stated that this would be help him to look after the aged mother who is staying in Bangalore. Hence, his request may be considered.

The Registrar informed that the sanctioned lien period of two years was over and more than one year has already been elapsed after his lien period. His appointment in the Univeristy of Hyderabad is through direct recruitment, which is already confirmed. There is no provision in the rule to extend the lien.

After detailed discussion, the Syndicate resolved not to consider the request of Dr. Sharath Ananthamurthy to rejoin the Bangalore University and to cancel his appointment in the Department of Physics as his lien period is over and his appointment as Professor in the University of Hyderabad has already been confirmed.

***Proceedings of the 157th meeting of the Syndicate held on 24.03.2021***

**ವಿಷಯ ಸಂಖ್ಯೆ:8:** 2020-21 ನೇ ಸಾಲಿನಿಂದ ಕೆಲವು ಕಾಲೇಜುಗಳ ಸ್ವಯಂ ಮುಚ್ಚುವ ಮನವಿಯನ್ನು ಪರಿಗಣಿಸಿ ಸಂಯೋಜನೆಯನ್ನು ರದ್ದುಪಡಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

***Proceedings of the 157th meeting of the Syndicate held on 24.03.2021***

**Item No. 9:** Discontinuation of MBA course at Indian Institute of Plantation Management Bengaluru and issue of No Objection Certificate-reg.

***Resolution:***

Deferred.

*Proceedings of the 157th meeting of the Syndicate held on 24.03.2021*

**Item No. 10:** Recovery of Inadmissible payment of Charge allowance of Rs. 2,31,865/- to Dr. Y. Narayana Chetty, Director of Sri. Allampalli Venkatram Chair on Labour Research, Department of Sociology, BUB-reg.

***Resolution:***

Deferred.

*Proceedings of the 157th meeting of the Syndicate held on 24.03.2021*

**Item No. 11:** Ratification for Deputation of Smt. Sujatha B.C. Associate Professor, Department of Electrical Engineering, UVCE, BUB to pursue Ph.D under Quality Improvement Programme.

***Resolution:***

Deferred.

*Proceedings of the 157th meeting of the Syndicate held on 24.03.2021*

**Item No 12:** Sanction of additional grants of Rs. 1,71,594/- to organize International Conference on Mathematics and its Applications (NCMA-2020) and National Science Day Celebration.

***Resolution:***

Deferred.

*Proceedings of the 157th meeting of the Syndicate held on 24.03.2021*

**Item No. 13** : To consider Institution of Endowment in the name of Sri (Late) M. Guruprasad for awards Cash Prize to a Student securing highest marks in M.Com PG. degree Course.

***Resolution:***

Deferred.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ: 14:** ಸಾಯಿ ಆಫೀಸ್ ಸಪ್ಲೈಯರ್ಸ್‌ರವರನ್ನು ಕಪ್ಪು ಪಟ್ಟಿಗೆ ಸೇರಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ: 15:** ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 24.02.2020 ರಂದು ನಡೆದ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಾಣಿಜ್ಯ ನಿಕಾಯಕ್ಕೆ (ಬಿ.ಬಿ.ಎಂ.) ಸಂಬಂಧಿಸಿದಂತೆ, ದಿನಾಂಕ: 24.02.2020 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

ಪರಾಮರ್ಶಿತ ಟಿಪ್ಪಣಿಯಲ್ಲಿ ತಾಂತ್ರಿಕ ನಿಕಾಯ ಇಂದು ನಮೂದಿಸಿರುವುದನ್ನು ವಾಣಿಜ್ಯ ನಿಕಾಯ ಎಂದು ಓದಿಕೊಳ್ಳತಕ್ಕದ್ದು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ: 16:** ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 24.02.2020 ರಂದು ನಡೆದ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಾಣಿಜ್ಯ ನಿಕಾಯಕ್ಕೆ (ಬಿ.ಕಾಂ.) ಸಂಬಂಧಿಸಿದಂತೆ, ದಿನಾಂಕ: 24.02.2020 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

ಪರಾಮರ್ಶಿತ ಟಿಪ್ಪಣಿಯಲ್ಲಿ ತಾಂತ್ರಿಕ ನಿಕಾಯ ಇಂದು ನಮೂದಿಸಿರುವುದನ್ನು ವಾಣಿಜ್ಯ ನಿಕಾಯ ಎಂದು ಓದಿಕೊಳ್ಳತಕ್ಕದ್ದು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ :17:** ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 26.02.2020 ರಂದು ನಡೆದ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಿಜ್ಞಾನ ನಿಕಾಯಕ್ಕೆ (ಬಿ.ಸಿ.ಎ.) ಸಂಬಂಧಿಸಿದಂತೆ, ದಿನಾಂಕ: 26.02.2020 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು

ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

ಪರಾಮರ್ಶಿತ ಟಿಪ್ಪಣಿಯಲ್ಲಿ ತಾಂತ್ರಿಕ ನಿಕಾಯ ಇಂದು ನಮೂದಿಸಿರುವುದನ್ನು ವಿಜ್ಞಾನ ನಿಕಾಯ ಎಂದು ಓದಿಕೊಳ್ಳತಕ್ಕದ್ದು.



**ವಿಷಯ ಸಂಖ್ಯೆ :18:** ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 26.02.2020 ರಂದು ನಡೆದ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಿಜ್ಞಾನ ನಿಕಾಯಕ್ಕೆ (ಬಿ.ಎಸ್ಸಿ.) ಸಂಬಂಧಿಸಿದಂತೆ, ದಿನಾಂಕ: 26.02.2020 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

ಪರಾಮರ್ಶಿತ ಟಿಪ್ಪಣಿಯಲ್ಲಿ ತಾಂತ್ರಿಕ ನಿಕಾಯ ಇಂದು ನಮೂದಿಸಿರುವುದನ್ನು ವಿಜ್ಞಾನ ನಿಕಾಯ ಎಂದು ಓದಿಕೊಳ್ಳತಕ್ಕದ್ದು.



**Item No. 19:** To continue the services of Liaison Officer for Bangalore University at New Delhi-reg.

***Resolution:***

Sri Prem Sohanlal, sought to know the details of works done by the Liaison Officer at New Delhi. Dr. B.C. Mylarappa said that, University is not getting any benefit from the services of the above official and his services be relieved immediately. He suggested to appoint an alternate person who is well versed with the functioning of the UGC and the University in order to co-ordinate and to attend the pending works of the University at U.G.C. and other offices at New Delhi. Dr. Govindraju urged to furnish the details of the duties

and responsibilities of the Liaison Officer appointed by the University and monthly work done statement submitted by the concerned official.

After detailed discussion, the Syndicate resolved to extend the services of Sri. Rajashekara Savanur only for the period from 12-08-2020 to 31-03-2021 and to discontinue his services. A suitable person be appointed in his place from 01-04-2021.

***Proceedings of the 157th meeting of the Syndicate held on 24.03.2021***

**ವಿಷಯ ಸಂಖ್ಯೆ 20:** ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಸೌಲಭ್ಯ ಮುಂದುವರಿಕೆಗೆ ಸಿಂಡಿಕೇಟ್ ಪ್ರಾಧಿಕಾರದ ಅನುಮೋದನೆ ಕೋರಿ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

***Proceedings of the 157th meeting of the Syndicate held on 24.03.2021***

**ವಿಷಯ ಸಂಖ್ಯೆ 21 :** ಬೆಂಗಳೂರು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿರುವ ಇಬ್ಬರು ಶುಶ್ರೂಷಕಿಯರುಗಳ ಸೇವೆಯನ್ನು ಪಾಳಿ ವ್ಯವಸ್ಥೆಯಡಿ ಕರ್ತವ್ಯ ನಿರ್ವಹಿಸಲು ಆರು ತಿಂಗಳ ಅವಧಿಗೆ ಮುಂದುವರೆಸುವ ಬಗ್ಗೆ.

**ನಿರ್ಣಯ:**

ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿರುವ ಇಬ್ಬರು ಶುಶ್ರೂಷಕಿಯರುಗಳ ಸೇವೆಯನ್ನು ಪಾಳಿ ವ್ಯವಸ್ಥೆಯಡಿ ಕರ್ತವ್ಯ ನಿರ್ವಹಿಸಲು ದಿನಾಂಕ: 22-09-2020ರಿಂದ ಜಾರಿಗೆ ಬರುವಂತೆ ಪ್ರಸ್ತುತ ಇರುವ ಷರತ್ತು ಮತ್ತು ನಿಬಂಧನೆಗೊಳಪಟ್ಟು ಮುಂದಿನ ಆರು ತಿಂಗಳ ಅವಧಿಗೆ ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು.

***Proceedings of the 157th meeting of the Syndicate held on 24.03.2021***

**ವಿಷಯ ಸಂಖ್ಯೆ 22:** 2020-21ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳು ಹಾಗೂ 2021-22ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ತಯಾರಿಸುವ ಬಗ್ಗೆ.

**ನಿರ್ಣಯ:**

ಸದರಿ ವಿಷಯವನ್ನು ವಿಷಯ ಸೂಚಿ ಸಂಖ್ಯೆ: 76ರೊಂದಿಗೆ ಚರ್ಚೆಗೆ ತೆಗೆದುಕೊಳ್ಳಲಾಯಿತು.

**ವಿಷಯ ಸಂಖ್ಯೆ: 23:** 2019–20ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರವನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

ವಿಶೇಷ ಆಹ್ವಾನಿತರಾಗಿ, ಭಾಗವಹಿಸಿದ್ದ ವಿತ್ತಾಧಿಕಾರಿಯವರು ಮಾತನಾಡಿ, 31–03–2020ಕ್ಕೆ ಅಂತ್ಯಗೊಂಡಂತೆ 2019–20 ವಾರ್ಷಿಕ ಲೆಕ್ಕ ಪತ್ರಗಳ ವಿವರಗಳನ್ನು ಸಭೆಗೆ ವಿವರಿಸಿದರು.

**ನಿರ್ಣಯ:**

ಚರ್ಚೆಯ ನಂತರ, 2019–20ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರವನ್ನು ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 47(2)ರ ಅಡಿಯಲ್ಲಿ ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.



**ವಿಷಯ ಸಂಖ್ಯೆ: 24:** ಹಿಂಬಾಕಿ (Backlog) ಹುದ್ದೆಗಳ ನೇಮಕದಡಿಯಲ್ಲಿ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಹುದ್ದೆಗೆ ನೇಮಕವಾಗಿರುವ ಡಾ. ಆದಿಮೂರ್ತಿರವರಿಗೆ ರಸಾಯನಶಾಸ್ತ್ರ ವಿಭಾಗದಲ್ಲಿ ವರದಿ ಮಾಡಿಕೊಳ್ಳಲು ಕಾಲಾವಕಾಶವನ್ನು ಕೋರಿ ಸಲ್ಲಿಸಿರುವ ಮನವಿಯನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಹಿಂಬಾಕಿ (Backlog) ಹುದ್ದೆಗಳ ನೇಮಕದಡಿಯಲ್ಲಿ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಹುದ್ದೆಗೆ ನೇಮಕವಾಗಿರುವ ಡಾ. ಆದಿಮೂರ್ತಿ ಅವರಿಗೆ, ಈ ಮೊದಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಸಹ ನೇಮಕಗೊಂಡ ಹುದ್ದೆಗೆ ಹಾಜರಾಗದ ಕಾರಣ ಅವರು ಮತ್ತೊಮ್ಮೆ ಕಾಲಾವಕಾಶ ಕೋರಿ ಸಲ್ಲಿಸಿರುವ ಮನವಿಯನ್ನು ಪರಿಗಣಿಸದೇ ಇರಲು ನಿರ್ಣಯಿಸಿ ಅವರ ನೇಮಕಾತಿಯನ್ನು ರದ್ದುಪಡಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 25:** ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ಕಛೇರಿ ಮತ್ತು ಬೆಂಗಳೂರು ಪ್ರಾಂತೀಯ ಕಛೇರಿಯವರು ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜಿನ ಯುವಿಸಿಇ ಆವರಣದ ಮೆಟ್ರೋ ಸ್ಟೇಷನ್ ಪಕ್ಕದಲ್ಲಿ ನೀಡಿರುವ 300x300 ಚ.ಅಡಿ ಜಾಗವನ್ನು ವಾಪಸ್ಸು ಪಡೆಯುವ ಕುರಿತು.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157h meeting of the Syndicate held on 24.03.2021*

**ವಿಷಯ ಸಂಖ್ಯೆ 26:** ಬೆಂಗಳೂರು ವಿಶ್ವವಿದ್ಯಾಲಯ ಹಣಕಾಸು ವಿಭಾಗಕ್ಕೆ ಆಂತರಿಕ ಆರ್ಥಿಕ ಸಲಹೆಗಾರರ ಹಾಗೂ ಆಂತರಿಕ ಲೆಕ್ಕಪರಿಶೋಧಕರನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಬಿ. ಕುಮಾರಸ್ವಾಮಿ (ನಿವೃತ್ತ ಲೆಕ್ಕಾಧಿಕಾರಿ) ಇವರ ಸೇವೆಯನ್ನು ಮುಂದುವರೆಸುವ ಆದೇಶವನ್ನು ಅನುಸಮರ್ಥಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157h meeting of the Syndicate held on 24.03.2021*

**ವಿಷಯ ಸಂಖ್ಯೆ 27:** ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕೋಶದಲ್ಲಿ ದಾಖಲಾದ ರಿಟ್ ಅರ್ಜಿಗಳನ್ನು ಪ್ಯಾನಲ್ ಅಡ್ವೋಕೇಟ್‌ಗಳಿಗೆ ವಹಿಸಿರುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157h meeting of the Syndicate held on 24.03.2021*

**ವಿಷಯ ಸಂಖ್ಯೆ 28:** ಶ್ರೀ ಶಶಿಕುಮಾರ್.ಕೆ ದಿವಂಗತ ಶ್ರೀ. ಕೇಶವಲು.ಜಿ, ಅನುಚರರು, ಸಮಾಜಕಾರ್ಯ ವಿಭಾಗ, ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ 29:** ಕಿರಿಯ ನೌಕರರಿಗೆ ನೀಡಿರುವ ಸೇವಾ ಹಿರಿತನದ ಸೌಲಭ್ಯಗಳನ್ನು ನಿವೃತ್ತಿ ಅಂಚಿನಲ್ಲಿರುವ ಹಿರಿಯ ಎಂ.ಆರ್.ಇ ನೌಕರರಿಗೂ ನೀಡುವಂತೆ ದಿನಾಂಕ 10.08.2020 ರಂದು ನೀಡಿರುವ ಜಂಟಿ ಮನವಿ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ 30:** ಶ್ರೀ ಭೀಮರಾವ್, ಶ್ರೀ ಕೆ. ಲಿಂಗರಾಜು ಮತ್ತು ಶ್ರೀ ಎಂ. ಕುಮಾರ, ಗ್ರೂಪ್ 'ಡಿ' ನೌಕರರಿಗೆ ಪ್ರಭಾರ ಭತ್ಯೆ ದರಗಳನ್ನು ಪರಿಷ್ಕರಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ 31:** ಶ್ರೀ ಚೇತನ್.ಯು, ದಿವಂಗತ ಶ್ರೀ. ಉಮಾಶಂಕರ್.ಆರ್, ಕಿರಿಯ ಸಹಾಯಕರು, ಪಿ.ಜಿ ಹಾಸ್ಟೆಲ್-1, ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ 32:** ದಿನಾಂಕ 27.01.2020 ರಂದು ನಡೆದ ಇಲಾಖಾ ಪರೀಕ್ಷಾ ಫಲಿತಾಂಶದಲ್ಲಿ ಅನುತ್ತೀರ್ಣರಾದ ಸಿಬ್ಬಂದಿಗಳಿಗೆ ಕೃಪಾಂಕವನ್ನು ನೀಡುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

ವಿಷಯ ಸಂಖ್ಯೆ 33: ಬೆಂಗಳೂರು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾದ ಒಬ್ಬ ಮಹಿಳಾ ವೈದ್ಯಾಧಿಕಾರಿಗಳ ಹಾಗೂ ಇಬ್ಬರು ಪುರುಷ ವೈದ್ಯಾಧಿಕಾರಿಗಳ ಸೇವೆಯನ್ನು ಮುಂದುವರೆಸುವ ಬಗ್ಗೆ.

ಡಾ॥ ಗೋವಿಂದರಾಜು ಅವರು ಮಾತನಾಡಿ, ವೈದ್ಯಾಧಿಕಾರಿಗಳ ಸೇವೆ ಪಡೆಯಲು ನೀಡಿದ ಜಾಹೀರಾತಿನಲ್ಲಿ, ಸಂಭಾವನೆಯನ್ನು ರೂ.60,000/- ನಿಗದಿಪಡಿಸಿ ಅವರ ನೇಮಕಾತಿಯ ನಂತರ ರೂ.80,000/-ಗಳನ್ನು ಮಾಹೆಯಾನ ನೀಡಿರುವುದು ಸರಿಯಾದ ಕ್ರಮವಲ್ಲವೆಂದು ತಿಳಿಸಿದರು. ನುರಿತ ವೈದ್ಯಾಧಿಕಾರಿಗಳ ಸೇವೆ ಪಡೆಯಲು ಹಾಗೂ ಅವರ ಸೇವೆಗನುಗುಣವಾಗಿ ಸಂಭಾವನೆಯನ್ನು ದಿನಾಂಕ: 27-12-2019ರ ಸಿಂಡಿಕೇಟ್‌ನಲ್ಲಿ ನಿಗದಿಪಡಿಸಲಾಗಿದೆ ಎಂದು ಕುಲಪತಿಗಳು ತಿಳಿಸಿದರು.

ನಿರ್ಣಯ:

ಚರ್ಚೆಯ ನಂತರ, ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಒಬ್ಬ ಮಹಿಳಾ ವೈದ್ಯಾಧಿಕಾರಿ ಹಾಗೂ ಒಬ್ಬ ಪುರುಷ ವೈದ್ಯಾಧಿಕಾರಿಯ ಸೇವೆಯನ್ನು ದಿನಾಂಕ: 16-12-2020 ರಿಂದ 15-12-2021ರ ಅವಧಿಗೆ ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು.

ಮುಂದುವರೆದು, ತಾತ್ಕಾಲಿಕ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿದ್ದ ಮತ್ತೊಬ್ಬ ವೈದ್ಯಾಧಿಕಾರಿಯು ಸೇವೆಯಿಂದ ಬಿಡುಗಡೆ ಮಾಡಲು ಮನವಿ ಸಲ್ಲಿಸಿರುವ ಕಾರಣ ಅವರು ಕಾರ್ಯ ನಿರ್ವಹಿಸಿದ ಅವಧಿಗೆ ಸಂಭಾವನೆ ಪಾವತಿಸಿ ಅವರನ್ನು ವಿಶ್ವವಿದ್ಯಾಲಯದ ಗುತ್ತಿಗೆ ಸೇವೆಯಿಂದ ಬಿಡುಗಡೆ ಮಾಡಲು ಸಿಂಡಿಕೇಟ್ ಅನುಮೋದಿಸಿತು.

Proceedings of the 157th meeting of the Syndicate held on 24.03.2021

ವಿಷಯ ಸಂಖ್ಯೆ 34: ಅರ್ಥಶಾಸ್ತ್ರ ವಿಭಾಗದ 2017-19ನೇ ಸಾಲಿನ 4ನೇ ಸೆಮಿಸ್ಟರ್ ನ ಪ.ಜ-ಪ.ಪಂ ವಿದ್ಯಾರ್ಥಿಗಳು ಪ್ರಾಜೆಕ್ಟ್ ವರದಿಯ ಧನ ಸಹಾಯವನ್ನು ಕೋರಿರುವ ಬಗ್ಗೆ.

ನಿರ್ಣಯ:

ವಿಷಯವನ್ನು ಮುಂದೂಡಲಾಯಿತು.

**Item No. 35:** Proceedings of Meeting of the Library Committee held on 01.09.2020

Sri Gopinath informed that, the University used to purchase books worth of 1.5 Crores every year. He wonders that, whether enough space in the University Library is available to keep the books, which were procured over the years and stock has been taken or not. Sri Videya Belagode Shreekanta urged that the proceedings of the Library Committee be approved only after the updatement of the stock register. Dr. Govindraju said that the details of proposed books, e-journals, approved by the Library Committee has not been enclosed to the proceedings. The vendors list need to be updated.

Sri Udaya Kumar M and other members took exception that the continuation of outsource employees working in the Library are included in the proceedings of the Library Committee as a subject, which is an administrative matter. Therefore, a separate agenda before the next Syndicate meeting be placed in this regard. The Vice-Chancellor clarified that during the course of Library Committee meeting, some of the members have raised the matter related to outsource employees working at the Library and he has clarified the issue by stating that they will be considered at the time of open selection as per rules.

Prof. T.V. Raju, informed that books worth minimum of Rs.10.00 Lakhs need to be procured before 31st March, 2021, in order to get renewal of recognition to University Law College from the Bar Council of India for the next academic year. Hence, he opined that the Library Committee proceedings may be approved.

The Vice-Chancellor has clarified the Library Committee has approved the budget provision for departments towards purchase of books

and journals and also for purchase of books and e-journals to the main Library and books will be purchased based on the list of books recommended by the concerned chairperson and the teachers of the departments. The concerned members of the Syndicate who are on the Library Committee can peruse the details of books and journals procured in the next meeting of the Library Committee.

***Resolution:***

After detailed discussion, the Syndicate resolved to approve the proceedings of Meeting of the Library Committee held on 01.09.2020.

Further, it was resolved to nominate Sri Udaya Kumar M, as a member of the Library Committee. The Syndicate members who are on the Library Committee may verify the list of books procured based on the Library Committee recommendations.



**ವಿಷಯ ಸಂಖ್ಯೆ: 36:** ಶ್ರೀಮತಿ ಆರ್. ವಿದ್ಯಾ, ಸಹಾಯಕ ಪ್ರಾಧ್ಯಾಪಕರು, ಉಡುಪು ಮತ್ತು ನಿರ್ವಹಣಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ರವರು ಐದು ತಿಂಗಳ ಅವಧಿಗೆ ವೇತನ ರಹಿತ ರಜೆಯನ್ನು (LWA) ವಿಸ್ತರಿಸಲು ಕೋರಿರುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಶ್ರೀಮತಿ ಆರ್. ವಿದ್ಯಾ, ಸಹಾಯಕ ಪ್ರಾಧ್ಯಾಪಕರು, ಉಡುಪು ಮತ್ತು ನಿರ್ವಹಣಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಇವರಿಗೆ ದಿನಾಂಕ: 19-03-2020ರ ಸಿಂಡಿಕೇಟ್ ನಿರ್ಣಯದಂತೆ ಮಂಜೂರಾಗಿದ್ದ ವೇತನ ರಹಿತ ರಜೆಯನ್ನು (LWA) ದಿನಾಂಕ: 15-02-2021ರ ವರೆಗೆ ಮುಂದುವರೆಸಿ ವಿಸ್ತರಿಸಲು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ: 37:** ವಿಶ್ವವಿದ್ಯಾಲಯ ಎಲ್ಲಾ ಕಛೇರಿ/ವಿಭಾಗಗಳ ದಿನನಿತ್ಯದ ಸ್ವಚ್ಛತಾ ಕಾರ್ಯ ನಿರ್ವಹಿಸಲು ಟೆಂಡರ್‌ಗಳನ್ನು ಆಹ್ವಾನಿಸಿ ನೂತನ ಗುತ್ತಿಗೆದಾರರು ಆಯ್ಕೆ ಆಗುವ ತನಕ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಮೆ. ಕ್ರಿಯೇಟಿವ್ ಇಂಟಿಗ್ರೇಟೆಡ್ ಸರ್ವೀಸಸ್ (ಪ್ರೈ). ಲಿ., ಬೆಂಗಳೂರು ರವರಿಂದ ಚಾಲ್ತಿಯಲ್ಲಿರುವ ಕರಾರು ಒಪ್ಪಂದದಲ್ಲಿನ ಷರತ್ತು ಮತ್ತು ನಿಬಂಧನೆಗೊಳಪಟ್ಟು ಗುತ್ತಿಗೆಯ ಸೇವೆಯನ್ನು ಸಿಂಡಿಕೇಟ್ ಪ್ರಾಧಿಕಾರದ ಅನುಮೋದನೆನ್ನು ಕಾಯ್ದಿರಿಸಿ ದಿನಾಂಕ 01.01.2021 ರಿಂದ ಅನ್ವಯವಾಗುವಂತೆ 3 ತಿಂಗಳ ಅವಧಿಗೆ ಅಂದರೆ 31ನೇ ಮಾರ್ಚ್–2021 ರವರೆವಿಗೆ ತಾತ್ಕಾಲಿಕವಾಗಿ ಮುಂದುವರೆಸಿರುವ ಆದೇಶವನ್ನು ಅನುಸಮರ್ಥನೆಗಾಗಿ ಕುರಿತು.

ಕುಲಪತಿಗಳು ಮಾತನಾಡಿ, ಕೇಂದ್ರ ಖರೀದಿ ಸಮಿತಿ ಸಭೆಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದ ವಿಭಾಗ ಮತ್ತು ಕಛೇರಿಗಳಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುವ ಸಂಬಂಧಪಟ್ಟಂತೆ, ಕರೆದಿರುವ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಿ, ಹೊಸದಾಗಿ ಟೆಂಡರ್ ಮಾಡಲು ನಿರ್ಣಯಿಸಿರುವ ಕಾರಣ, ನೂತನ ಟೆಂಡರ್‌ದಾರರನ್ನು ಆಯ್ಕೆ ಮಾಡುವವರೆಗೆ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಮೆ. ಕ್ರಿಯೇಟಿವ್ ಇಂಟಿಗ್ರೇಟೆಡ್ ಸರ್ವೀಸಸ್ (ಪ್ರೈ). ಲಿ., ಬೆಂಗಳೂರು, ಇವರ ಸೇವೆಯನ್ನು ಮುಂದುವರೆಸಬಹುದಾಗಿದೆ ಎಂದು ತಿಳಿಸಿದರು.

ಶ್ರೀ ಪ್ರೇಮ ಸೋಹನ್ ಲಾಲ್ ಅವರು ಮಾತನಾಡಿ, ಶಾರ್ಟ್ ಟರ್ಮ್ ಟೆಂಡರ್ ಅನ್ನು ಆಹ್ವಾನಿಸಿ, ವಿಶ್ವವಿದ್ಯಾಲಯ ಸ್ವಚ್ಛತಾ ಕಾರ್ಯ ನಿರ್ವಹಣೆಗೆ ನೂತನ ಗುತ್ತಿಗೆದಾರರನ್ನು ಆಯ್ಕೆ ಮಾಡಲು ಕೂಡಲೇ ಕ್ರಮ ಕೈಗೊಳ್ಳಬೇಕು. ಪ್ರಸ್ತುತ ನಿರ್ವಹಿಸುತ್ತಿರುವ ಗುತ್ತಿಗೆದಾರರ ಸೇವೆಯು ಸಮರ್ಪಕವಾಗಿರುವುದಿಲ್ಲವೆಂದು ತಿಳಿಸಿದರು. ಡಾ॥ ಸುಧಾಕರ ಹೆಚ್, ಅವರು ಮಾತನಾಡಿ, ವಿಭಾಗಗಳಲ್ಲಿ ಸ್ವಚ್ಛತಾ ಕಾರ್ಯ ಸರಿಯಾಗಿ ನಡೆಯುತ್ತಿದೆಯೇ ಎಂಬುದನ್ನು ಖಚಿತಪಡಿಸುವುದು ಆಯಾ ವಿಭಾಗದ ಮುಖ್ಯಸ್ಥರ ಜವಾಬ್ದಾರಿಯಾಗಿರುತ್ತದೆ, ಟೆಂಡರ್‌ದಾರರನ್ನು ಕರೆದು ಸಭೆ ನಡೆಸಿ, ಸ್ವಚ್ಛತೆಯ ಪರಿಪೂರ್ಣತೆಯ ಬಗ್ಗೆ ತಾಕೀತು ಮಾಡಲು ತಿಳಿಸಿದರು. ಡಾ॥ ಗೋವಿಂದರಾಜು ಅವರು ಮಾತನಾಡಿ, ಸ್ವಚ್ಛತೆ ಕಾರ್ಯ ನಿರ್ವಹಣೆ ಬಗ್ಗೆ ಉಸ್ತುವಾರಿ ಮಾಡಲು ಒಂದು ಉಸ್ತುವಾರಿ ಸಮಿತಿಯನ್ನು ರಚಿಸಬೇಕೆಂದು ಸಲಹೆ ನೀಡಿದರು.

**ನಿರ್ಣಯ:**

ಸುದೀರ್ಘ ಚರ್ಚೆಯ ನಂತರ, ಹದಿನೈದು (15) ದಿವಸಗಳ ಒಳಗಾಗಿ ನೂತನ ಟೆಂಡರ್ ಕರೆದು, ಎರಡು ತಿಂಗಳ ಒಳಗೆ ನೂತನ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಹೊಸ ಗುತ್ತಿಗೆದಾರರನ್ನು

ಆಯ್ಕೆ ಮಾಡುವ ಷರತ್ತಿಗೊಳಪಟ್ಟು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಮೆ. ಕ್ರಿಯೇಟಿವ್ ಇಂಟಿಗ್ರೇಟೆಡ್ ಸರ್ವೀಸಸ್ (ಪ್ರೈ). ಲಿ., ಬೆಂಗಳೂರು, ಅವರ ಸೇವೆಯನ್ನು, ನೂತನ ಟೆಂಡರ್‌ದಾರರು ಆಯ್ಕೆಯಾಗುವವರೆಗೆ ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು ಹಾಗೂ ಸದರಿ ಏಜೆನ್ಸಿಯ ಸೇವೆಯನ್ನು ಮಾರ್ಚ್ 31, 2021ರ ವರೆಗೆ ಮುಂದುವರೆಸಿರುವ ಆಡಳಿತಾತ್ಮಕ ಕ್ರಮವನ್ನು ಸಹ ಸಿಂಡಿಕೇಟ್ ಅನುಸಮರ್ಥಿಸಿತು.



**ವಿಷಯ ಸಂಖ್ಯೆ: 38:** 2019–20 ಮತ್ತು 2020–21ನೇ ಸಾಲಿನ ಯು.ವಿ.ಸಿ.ಇ ಸ್ನಾತಕೋತ್ತರ ಇಂಜಿನಿಯರಿಂಗ್ ಕೋರ್ಸುಗಳಿಗೆ ಭೋಧನಾ ಶುಲ್ಕ ಪರಿಷ್ಕರಿಸಿ ಮಾರ್ಪಡಿತ ಆದೇಶ ಹೊರಡಿಸಿರುವ ಕುರಿತು.

**ನಿರ್ಣಯ:**

ಸುದೀರ್ಘ ಚರ್ಚೆಯ ನಂತರ, 2019–20 ಮತ್ತು 2020–21ನೇ ಸಾಲಿನ ಯು.ವಿ.ಸಿ.ಇ ಕಾಲೇಜಿನ (ಎಂ.ಟೆಕ್. ಮತ್ತು ಎಂ.ಆರ್ಕ್) ಸ್ನಾತಕೋತ್ತರ ಇಂಜಿನಿಯರಿಂಗ್ ಕೋರ್ಸುಗಳಿಗೆ ಭೋಧನಾ ಶುಲ್ಕ ಪರಿಷ್ಕರಿಸಿ ಹೊರಡಿಸಲಾಗಿರುವ ಆದೇಶ ಸಂಖ್ಯೆ: U.O.No:Aca-I/A-1/M.E.&M.Arch/Modified Fee Structure/2020-21 ದಿನಾಂಕ: 01.12.2020ನ್ನು ಸಿಂಡಿಕೇಟ್ ಅನುಸಮರ್ಥಿಸಿತು.



**ವಿಷಯ ಸಂಖ್ಯೆ 39:** ಅಭಿಮತದ ಆಯ್ಕೆ ಅನುಸಾರ ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಗೊಂಡಿರುವ ಬೋಧಕೇತರ ಸಿಬ್ಬಂದಿಗಳ ವರ್ಗಾವಣೆ ಕುರಿತು.

**ನಿರ್ಣಯ:**

ಬೆಂಗಳೂರು ವಿಶ್ವವಿದ್ಯಾಲಯದ ವಿಭಜನೆಯ ನಂತರ, ತಮ್ಮ ಹುದ್ದೆಯ ಧಾರಣಾಧಿಕಾರವನ್ನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಉಳಿಸಿಕೊಂಡು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಲ್ಪಟ್ಟ ಸಿಬ್ಬಂದಿಗಳ ಪೈಕಿ ಶ್ರೀ ಬಿ ಶಿವಶಂಕರ್, ಸಹಾಯಕರು ಹಾಗೂ ಶ್ರೀ ರವೀಂದ್ರನಾಥ್ ಡಿ, ಕಿರಿಯ ಸಹಾಯಕರು ಇವರು ಪುನಃ ಬೆಂಗಳೂರು ವಿಶ್ವವಿದ್ಯಾಲಯದ ಸೇವೆಗೆ ಮರು–ವರ್ಗಾಯಿಸಲು ಸಲ್ಲಿಸಿರುವ ಅವರ ಮನವಿಯನ್ನು ಪರಿಗಣಿಸಿ, ಸರ್ಕಾರದ ಪತ್ರ ಸಂಖ್ಯೆ: ಇಡಿ 346 ಯುಬಿವಿ 2018 ದಿನಾಂಕ:02–12–2019ರಂತೆ ಅವರ ಸೇವೆಯನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ: 40:** ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀಮತಿ ಪ್ರತಿಭಾ ಜಿ ಇವರ ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರ ಎಂದು ಘೋಷಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀಮತಿ ಪ್ರತಿಭಾ ಜಿ, ಗ್ರೂಪ್ ಡಿ ನೌಕರರು, ಇ-ಆಡಳಿತ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಇವರ ಪರೀಕ್ಷಾರ್ಥ ಸೇವಾ ಅವಧಿಯು, ಕರ್ನಾಟಕ ನಾಗರೀಕ ಸೇವಾ (Probationary Period) ನಿಯಮ 1977(3) ಪ್ರಕಾರ ದಿನಾಂಕ: 18-12-2020ರಂದು ತೃಪ್ತಿಕರವಾಗಿ ಪೂರ್ಣಗೊಂಡಿದೆ ಎಂದು ಘೋಷಿಸಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ:41:** ಶ್ರೀಮತಿ ನಾಗರತ್ನ.ಎಂ, ದಿವಂಗತ ಶ್ರೀ ಚಾಮಪ್ಪ, ಗ್ರೂಪ್ 'ಡಿ' ರವಾನೆ ಮತ್ತು ಸ್ವೀಕಾರ ವಿಭಾಗ, ಇವರ ಪತ್ನಿ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ :42:** ಬೆಂಗಳೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀ ಪ್ರಸನ್ನ.ಎ.ಎಂ.ಆರ್ (ಗಣಕ ಯಂತ್ರ ಬೆರಳಚ್ಚು) ಇವರ ಸೇವೆಯನ್ನು ಮುಂದುವರೆಸುವ ವಿಷಯದ ಬಗ್ಗೆ.

ಡಾ॥ ಸುಧಾಕರ ಹೆಚ್. ಅವರು ಮಾತನಾಡಿ, ಶ್ರೀ ಪ್ರಸನ್ನ ಎ.ಎಂ.ಆರ್ ಅವರು ಎನ್.ಎಸ್.ಎಸ್ ವಿಭಾಗದಲ್ಲಿ ಕಳೆದ 20 ವರ್ಷಗಳಿಂದ ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಹೆಸರು ದಿನಗೂಲಿ ನೌಕರರ ಪಟ್ಟಿಯಿಂದ ಕೈಬಿಡಲಾಗಿದೆ. ಆದಕಾರಣ, ಇವರ ಹೆಸರನ್ನು ದಿನಗೂಲಿ ನೌಕರರ ಪಟ್ಟಿಯಲ್ಲಿ ಸೇರಿಸಬೇಕೆಂದು ಆಗ್ರಹಿಸಿದರು. ಕುಲಪತಿಗಳು ಉತ್ತರಿಸಿ, ಅವರ ಸೇವೆಯ ವಿವರದ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ, ಎನ್.ಎಸ್.ಎಸ್ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀ ಪ್ರಸನ್ನ ಎ.ಎಂ.ಆರ್ (ಗಣಕ ಯಂತ್ರ ಬೆರಳಚ್ಚು)

ಇವರ ಸೇವೆಯನ್ನು ದಿನಾಂಕ: 02-06-2020ರಿಂದ 01-06-2021ರ ವರೆಗೆ ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು.



**ವಿಷಯ ಸಂಖ್ಯೆ 43:** ಶ್ರೀ ಎನ್. ಚಂದ್ರಶೇಖರ್, ಫ್ಲೋರ್‌ಮನ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ ವಿಭಾಗ, ಯು.ವಿ.ಸಿ.ಇ ಇವರಿಗೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಎ.ಐ.ಸಿ.ಟಿ.ಇ ವೇತನ ಶ್ರೇಣಿಯನ್ನು ವಿಸ್ತರಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.



**ವಿಷಯ ಸಂಖ್ಯೆ 44:** ಶ್ರೀ ಕೇಶವರೆಡ್ಡಿ, ಗ್ರೂಪ್ 'ಡಿ' ಸಿಬ್ಬಂದಿ ವಿಭಾಗ-1 (ಸ್ಥಳ ನಿಯುಕ್ತಿ ನಿರೀಕ್ಷೆಯಲ್ಲಿರುವ) ಇವರ ಅನಧಿಕೃತ ಗೈರು ಹಾಜರಿಯ ಬಗ್ಗೆ ಕ್ರಮವಹಿಸುವ ಹಾಗೂ ದಂಡನೆಯನ್ನು ವಿಧಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.



**ವಿಷಯ ಸಂಖ್ಯೆ 45:** ಡಾ ಸಿ. ಸೋಮಶೇಖರ್, ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ ಇವರಿಗೆ ಸಬಾಟಿಕಲ್ ರಜೆಯನ್ನು ಮಂಜೂರು ಮಾಡುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.



**Item No. 46:** Providing 12-00 Acres of land to BWSSB to establish 60 MLD Waste Water Treatment Plant at Bangalore University Campus to Provide water from waste water treatment to all the tress herbs, sherbs and grass of Bangalore University as there is scarcity of water to the plants.

The Vice-Chancellor briefed that, the Bangalore Water Supply and Sewage Board (BWSSB) on the direction of National Green Tribunal has taken up a project to establish Waste Water Treatment Plant at along the

Vrushabhavathi valley of Jnanabharathi Campus. They are seeking 12 Acres of land at Nayandahalli Village above Vrushabhavathi River by the Sport Authority of India to establish 60 MLD Waste Water Treatment Plant. They have informed the issue has already been discussed in the meeting chaired by the concerned minister. Earlier, the Syndicate at its meeting held on 20-05-2015 has accepted the proposal. Hence an allocation of 08 to 10 acres of land to BWSSB may be considered by the Syndicate. Mr. Gopinath expressed that BWSSB has not given any detailed proposal with regard to setting up of STP plant. Dr. B.C. Mylarappa said that the proposal of BWSSB may be reconsidered in view of the stench emanating from the STP plant and it will create health hazardous to the students and faculty members. Dr. Govindraju sought to know whether BWSSB has conducted environment impact assessment or not. Therefore, before giving permission an assessment be made on environment impact at Jnanabharathi campus and also details of benefits to the University are to be furnished to the Syndicate. And he insisted not to consider the request of the BWSSB in this regard.

***Resolution:***

After detailed discussion, the Syndicate resolved to defer the matter.

**ವಿಷಯ ಸಂಖ್ಯೆ 47:** ಶ್ರೀ ಹೆಚ್. ವಿಶ್ವನಾಥ್, ಪ್ರಥಮ ದರ್ಜೆ ಭೂಮಾಪಕರು (ನಿವೃತ್ತಿ), ಕಾಂಟ್ರಾಕ್ಟ್ ಸರ್ವೇಯರ್, ಬೆಂಗಳೂರು ವಿಶ್ವವಿದ್ಯಾಲಯ, ಇವರ ಸಮಾಲೋಚನೆ ಶುಲ್ಕವನ್ನು ಪರಿಷ್ಕರಿಸುವ ಹಾಗು ವಾಹನ ಭತ್ಯೆಯನ್ನು (Conveyance Allowance) ಮಂಜೂರು ಮಾಡುವ ಬಗ್ಗೆ.

ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ ಹಾಗೂ ಪ್ರೊ. ಬಿ.ಸಿ. ಮೈಲಾರಪ್ಪ ಅವರುಗಳು ಮಾತನಾಡಿ ಕೂಡಲೇ ಬೇರೆ ಭೂಮಾಪಕರ ಸೇವೆಯನ್ನು ಪಡೆಯಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಹಾಗೂ

ಈಗಿರುವ ಸರ್ವೇಯರ್ ಅವರ ಸೇವೆಯನ್ನು ಮುಂದುವರೆಸಬಾರದೆಂದು ತಿಳಿಸಿದರು. ಕುಲಸಚಿವರು ಮಾತನಾಡಿ, ಮತ್ತೊಬ್ಬ ಸರ್ವೇಯರ್ ಅವರ ಸೇವೆಯನ್ನು ಪಡೆಯುವವರೆಗೆ ಶ್ರೀ ಹೆಚ್. ವಿಶ್ವನಾಥ್, ಪ್ರಥಮ ದರ್ಜೆ ಭೂಮಾಪಕರು (ನಿವೃತ್ತಿ), ಕಾಂಟ್ರಾಕ್ಟ್ ಸರ್ವೇಯರ್, ಬೆಂಗಳೂರು ವಿಶ್ವವಿದ್ಯಾಲಯ, ಇವರ ಸೇವೆಯನ್ನು ಮುಂದುವರೆಸಿ ಅವರ ವೇತನವನ್ನು ರೂ.30,000/- ರಿಂದ ರೂ.40,000/-ಗಳಿಗೆ ಹೆಚ್ಚಿಸುವ ಬಗ್ಗೆ ನಿರ್ಣಯ ಕೈಗೊಳ್ಳಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ಹದಿನೈದು ದಿವಸಗಳ ಒಳಗಾಗಿ ಬೇರೊಬ್ಬ ಸರ್ವೇಯರ್ ಅವರ ಸೇವೆಯನ್ನು ಪಡೆಯಲು ಹದಿನೈದು ದಿನಗಳ ಒಳಗಾಗಿ ಪತ್ರಿಕಾ ಪ್ರಕಟಣೆ ನೀಡಿ ಮುಂದಿನ ಕ್ರಮ ಕೈಗೊಳ್ಳಬೇಕೆಂದು ಹಾಗೂ ಪರ್ಯಾಯ ವ್ಯವಸ್ಥೆ ಆಗುವವರೆಗೆ, ಶ್ರೀ ಹೆಚ್. ವಿಶ್ವನಾಥ್, ಪ್ರಥಮ ದರ್ಜೆ ಭೂಮಾಪಕರು (ನಿವೃತ್ತಿ), ಕಾಂಟ್ರಾಕ್ಟ್ ಸರ್ವೇಯರ್, ಬೆಂಗಳೂರು ವಿಶ್ವವಿದ್ಯಾಲಯ, ಇವರ ಸೇವೆಯನ್ನು ಮುಂದುವರೆಸಲು ಮತ್ತು ಅವರ ಸಂಭಾವನೆಯನ್ನು ಭವಿಷ್ಯಾವರ್ತಿಯಾಗಿ ಮಾಹೆಯಾನ ರೂ.30,000/- ರಿಂದ ರೂ.35,000/-ಗಳಿಗೆ ಹೆಚ್ಚಿಸಿ ಮಂಜೂರು ಮಾಡಲು ಸಿಂಡಿಕೇಟ್ ನಿರ್ಣಯಿಸಿತು.



**ವಿಷಯ ಸಂಖ್ಯೆ 48:** ಬೆಂಗಳೂರು ವಿಶ್ವವಿದ್ಯಾಲಯ ಗ್ರಂಥಾಲಯಕ್ಕೆ ಕ್ರೋಢೀಕೃತ ವೇತನದಡಿ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಸಹಾಯಕ ಗ್ರಂಥಪಾಲರ ಸೇವೆಯನ್ನು ಪಡೆಯುವ ಬಗ್ಗೆ.

ಡಾ॥ ಗೋವಿಂದರಾಜು ಅವರು ಮಾತನಾಡಿ, ಶ್ರೀ ಶಿವರಾಜು ಅವರು ಗುತ್ತಿಗೆ ಆಧಾರದ ಮೇಲೆ ಸಹಾಯಕ ಗ್ರಂಥಪಾಲರ ನೇಮಕಾತಿಗೆ ಸಂಬಂಧಿಸಿದಂತೆ ಸಂದರ್ಶನಕ್ಕೆ ಹಾಜರಾಗಿ, ಅವರನ್ನು ಆಯ್ಕೆ ಮಾಡಲಾಗಿದೆ. ಅವರಿಗೆ ಇನ್ನೂ ಆದೇಶ ನೀಡಿರುವುದಿಲ್ಲ ಹಾಗೂ ಅವರ ಹೆಸರೂ ಸಹ ಪರಾಮರ್ಶಿತ ಟಿಪ್ಪಣಿಯಲ್ಲಿ ಬಿಟ್ಟುಹೋಗಿರುವುದಾಗಿ ತಿಳಿಸಿದರು.

ಡಾ॥ ಸುಧಾಕರ ಹೆಚ್ ಅವರು ಮಾತನಾಡಿ, ಗ್ರಂಥಾಲಯಕ್ಕೆ ಸಹಾಯಕ ಗ್ರಂಥಪಾಲಕರ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ ಪಡೆಯಲು 22-12-2020ರಂದು ಸಂದರ್ಶನ ನಡೆಸಿದ್ದರೂ,

ಇಲ್ಲಿಯವರೆಗೆ ಆದೇಶ ನೀಡಿರುವುದಿಲ್ಲ ಹಾಗೂ ಪ್ರಸ್ತುತ ಮಂಡಿಸಿರುವ ಪರಾಮರ್ಶಿತ ಟಿಪ್ಪಣಿಯು ಸ್ಪಷ್ಟವಾಗಿರುವುದಿಲ್ಲ.

ಕುಲಪತಿಗಳು ಉತ್ತರಿಸಿ, ದಿನಾಂಕ: 22-12-2020ರಂದು ನಡೆದ ಕ್ರೋಢೀಕೃತ ವೇತನದಡಿ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಸಹಾಯಕ ಗ್ರಂಥಪಾಲರ ಸೇವೆಯನ್ನು ಪಡೆಯುವ ಬಗ್ಗೆ ಸಂದರ್ಶನ ಸಮಿತಿಯ ನಡಾವಳಿಗಳು ಹಾಗೂ ಹೊಸ ಆದೇಶ ನೀಡಲು ತಡವಾಗಿರುವುದರಿಂದ, ವಿದ್ಯಾರ್ಥಿಗಳಿಗೆ ಗ್ರಂಥಾಲಯ ಸೇವೆಯನ್ನು ನೀಡುವ ದೃಷ್ಟಿಯಿಂದ ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಿಸಿರುವ ಏಳು ಜನರ ಸೇವೆಯನ್ನು ಉಪಯೋಗಿಸಿಕೊಂಡಿರುವುದರಿಂದ, ಅವರ ವೇತನ ಬಾಕಿ ನೀಡಲು ಪ್ರಸ್ತಾವನೆ ಮಂಡಿಸಲಾಗಿದೆ.

**ನಿರ್ಣಯ:**

ಚರ್ಚೆಯ ನಂತರ, ಕ್ರೋಢೀಕೃತ ವೇತನದಡಿ ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಸಹಾಯಕ ಗ್ರಂಥಪಾಲರ ಸೇವೆಯನ್ನು ಪಡೆಯುವ ಬಗ್ಗೆ ದಿನಾಂಕ: 22-12-2020ರಂದು ನಡೆದ ಸಂದರ್ಶನ ಸಮಿತಿಯ ನಡಾವಳಿಗಳನ್ನು ಸಿಂಡಿಕೇಟ್ ಅನುಮೋದಿಸಿತು. ಮುಂದುವರೆದು, ಈಗಾಗಲೇ ಗುತ್ತಿಗೆ ಆಧಾರದ ಮೇಲೆ ಸಹಾಯಕ ಗ್ರಂಥಪಾಲರಾಗಿ ಕೆಲಸ ನಿರ್ವಹಿಸಿರುವವರಿಗೆ ಅನ್ವಯವಾಗುವ ದಿನಾಂಕದಿಂದ ಬಾಕಿ ಇರುವ ಸಂಭಾವನೆಯನ್ನು ಬಿಡುಗಡೆ ಮಾಡಲು ಸಿಂಡಿಕೇಟ್ ಅನುಮೋದಿಸಿತು.



**ವಿಷಯ ಸಂಖ್ಯೆ 49:** ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಜಲಮಂಡಳಿ ವತಿಯಿಂದ ಒದಗಿಸುತ್ತಿರುವ ಆರ್.ಆರ್ ಸಂಖ್ಯೆ ಡಬ್ಲ್ಯೂ-1188569/ಸಿಎನ್‌ಡಿ-4ರಲ್ಲಿ ಹೆಚ್ಚುವರಿಯಾಗಿ ಬಂದಿರುವ ನೀರಿನ ಶುಲ್ಕ ರೂ.20,38,457.00 ಗಳಿಗೆ ಬಂದಿರುವ ಬಡ್ಡಿ ಮತ್ತು ಚಕ್ರ ಬಡ್ಡಿಯ ಹೆಚ್ಚುವರಿ ಮೊತ್ತವನ್ನು ಪಾವತಿಸುವ ಬಗ್ಗೆ.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ದಿನಾಂಕ: 23-03-2021ರಂದು ಜರುಗಿದ ಹಣಕಾಸು ಸಮಿತಿಯ ಸಭೆಯಲ್ಲಿ ಒಂದು ಬಾರಿಯ ಕ್ರಮವಾಗಿ, ಯು.ವಿ.ಸಿ.ಇ. ನೀರಿನ ಬಾಬ್ತು ಸಂಬಂಧ ಜಲಮಂಡಳಿಗೆ ನೀಡಬೇಕಾದ ಬಾಕಿ ಮೊತ್ತ ರೂ.6.00 ಕೋಟಿಯಷ್ಟು ಬಾಕಿ ಮೊತ್ತವನ್ನು ಪಾವತಿಸಲು ಅನುಮೋದಿಸಿದೆ. ಅದೇ ರೀತಿ ಜ್ಞಾನಭಾರತಿ ಆವರಣಕ್ಕೆ ಸರಬರಾಜಾಗುತ್ತಿರುವ

ಆರ್.ಆರ್ ಸಂಖ್ಯೆ ಡಬ್ಲ್ಯೂ–1188569/ಸಿಎನ್‌ಡಿ–4ರಲ್ಲಿ ಹೆಚ್ಚುವರಿಯಾಗಿ ಬಂದಿರುವ ನೀರಿನ ಶುಲ್ಕವನ್ನು ಪಾವತಿಸಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಜ್ಞಾನಭಾರತಿ ಆವರಣಕ್ಕೆ ಸರಬರಾಜಾಗುತ್ತಿರುವ ಆರ್.ಆರ್ ಸಂಖ್ಯೆ ಡಬ್ಲ್ಯೂ–1188569/ಸಿಎನ್‌ಡಿ–4ರಲ್ಲಿ ನೀರಿನ ವೆಚ್ಚದ ಹಿಂಬಾಕಿ ಮೊತ್ತ ರೂ.87,65,252/– (ಎಂಬತ್ತೇಳು ಲಕ್ಷದ ಅರವತ್ತೈದು ಸಾವಿರದ ಇನ್ನೂರ ಐವತ್ತೆರಡು ರೂಪಾಯಿಗಳು) ಹಾಗೂ ಈಗಾಗಲೇ 3–03–2021ರಂದು ಜರುಗಿದ ಹಣಕಾಸು ಸಮಿತಿಯ ಸಭೆಯಲ್ಲಿ ಶಿಫಾರಸ್ಸು ಮಾಡಿರುವ ಯು.ವಿ.ಸಿ.ಇ.ಗೆ ಸಂಬಂಧಿಸಿದ ನೀರಿನ ಬಿಲ್ಲಿನ ಬಾಕಿ ಮೊತ್ತ ಪಾವತಿಸಲು ಸಿಂಡಿಕೇಟ್ ಅನುಮೋದಿಸಿತು.



**ವಿಷಯ ಸಂಖ್ಯೆ 50:** ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ.

**ನಿರ್ಣಯ:**

ಡಾ॥ ಗೋವಿಂದರಾಜು ಅವರು ಮಾತನಾಡಿ, ಅರ್ಥಶಾಸ್ತ್ರ ವಿಭಾಗದಲ್ಲಿ, ಡಾ॥ ಎಸ್.ಆರ್. ಕೇಶವ ಅವರು ಡಾ॥ ಜಿ.ಎಲ್. ಪಾರ್ವತಮ್ಮ ಅವರು ಪ್ರಾಧ್ಯಾಪಕರಾಗಿ ಪದೋನ್ನತಿ ಹೊಂದುವ ಮೊದಲೇ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದಕಾರಣ, ಅವರನ್ನು ಸದರಿ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಬೇಕೆಂದು ತಿಳಿಸಿದರು. ಅವರು ಮುಂದುವರೆದು, ಕೆಲವು ವಿಭಾಗದ ಅಧ್ಯಕ್ಷರ ಅವಧಿಯು ಫೆಬ್ರವರಿ ಮಾಹೆಯಲ್ಲಿಯೇ ಮುಗಿದಿದ್ದು, ಮುಂಚಿತವಾಗಿ ಸಿಂಡಿಕೇಟ್ ಸಭೆ ಮಂಡಿಸದಿರುವುದಕ್ಕೆ ತಮ್ಮ ಅಸಮಾಧಾನ ವ್ಯಕ್ತಪಡಿಸಿ, ಇನ್ನು ಮುಂದೆ ಮುಂಚಿತವಾಗಿ ಅಧ್ಯಕ್ಷರ ನೇಮಕಾತಿ ವಿಷಯವನ್ನು ಮಂಡಿಸಬೇಕೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ, ಪ್ರಾಧ್ಯಾಪಕರಾಗಿ ಡಾ॥ ಎಸ್.ಆರ್. ಕೇಶವ ಅವರು ಪದೋನ್ನತಿ ದಿನಾಂಕವು 02–09–2014 ಆಗಿದ್ದು, ಡಾ॥ ಜಿ.ಎಲ್. ಪಾರ್ವತಮ್ಮ ಅವರ ಪದೋನ್ನತಿ ದಿನಾಂಕವು 09–08–2014 ಆಗಿದೆ. ಶಿಕ್ಷಕರ ಜ್ಯೇಷ್ಠತೆಯನ್ನು ನಿಗದಿಪಡಿಸುವಾಗ ಯು.ಜಿ.ಸಿ. ನಿಯಮಾನುಸಾರ ಪ್ರಾಧ್ಯಾಪಕ ಹುದ್ದೆಗೆ ಅರ್ಹತೆ ಹೊಂದಿದ ದಿನಾಂಕವನ್ನು ಪರಿಗಣಿಸಬೇಕಾಗುತ್ತದೆ. ಆದಕಾರಣ, ಡಾ॥

ಜಿ.ಎಲ್. ಪಾರ್ವತಮ್ಮ ಅವರು ಡಾ॥ ಎಸ್.ಆರ್. ಕೇಶವ ಅವರಿಗಿಂತ ಪ್ರಾಧ್ಯಾಪಕ ಹುದ್ದೆಯಲ್ಲಿ ಹಿರಿಯರಾಗಿರುತ್ತಾರೆ ಎಂದು ತಿಳಿಸಿದರು.

ಡಾ॥ ಸುಧಾಕರ ಹೆಚ್ ಅವರು ಮಾತನಾಡಿ, ಈಗಾಗಲೇ ಉಚ್ಚನ್ಯಾಯಾಲಯದಿಂದ ಶೈಕ್ಷಣಿಕ ವರ್ಷದ ಕೊನೆಯವರೆಗೆ ಸೇವೆಯನ್ನು ಮುಂದುವರೆಸಲು, ಇತ್ತೀಚೆಗೆ ನಿವೃತ್ತರಾದ, ಯು.ವಿ.ಸಿ.ಇ.ಯ ಎಲೆಕ್ಟ್ರಾನಿಕ್ ಸೈನ್ಸ್ ವಿಭಾಗದ, ಡಾ॥ ಜಿ. ನರೇಂದ್ರ ಕುಮಾರ್ ಹಾಗೂ ಶಿಕ್ಷಣ ವಿಭಾಗದ ಡಾ॥ ಹೆಚ್.ಆರ್. ಜಯಮ್ಮ ಅವರುಗಳು ಆದೇಶ ಪಡೆದಿದ್ದಾರೆ. ಆದಕಾರಣ ಅವರಂತೆಯೇ ಅವರನ್ನು ಮುಂದುವರೆಸುವ ಹಾಗೇ ಡಾ॥ ಹೆಚ್.ಸಿ. ವಜ್ರಪ್ಪ ಅವರ ಸೇವೆಯನ್ನು ಪ್ರಸಕ್ತ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಮುಂದುವರೆಸಬೇಕೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ ಡಾ॥ ಹೆಚ್.ಸಿ. ವಜ್ರಪ್ಪ ಅವರ ಸೇವೆಯನ್ನೂ ಸಹ ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಮುಂದುವರೆಸಲಾಗುವುದು ಎಂದು ತಿಳಿಸಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ಈ ಕೆಳಕಂಡ ವಿಭಾಗಗಳಿಗೆ ಆ ವಿಭಾಗಗಳಿಗೆ ಎದುರಾಗಿ ನಮೂದಿಸಿರುವ ಶಿಕ್ಷಕರುಗಳನ್ನು ಎರಡು ವರ್ಷಗಳ ಅವಧಿಗೆ ವಿಶ್ವವಿದ್ಯಾಲಯವು ಆದೇಶ ಹೊರಡಿಸುವ ದಿನಾಂಕದಿಂದ ಅಧ್ಯಕ್ಷರನ್ನಾಗಿ / ಕೋ-ಆರ್ಡಿನೇಟರ್ ಆಗಿ ನೇಮಕ ಮಾಡಲು ಸಿಂಡಿಕೇಟ್ ಅನುಮೋದಿಸಿತು.

| ಕ್ರ.ಸಂ. | ವಿಭಾಗ | ಶಿಕ್ಷಕರ ಹೆಸರು |
|---|---|---|
| 1. | ಶಿಕ್ಷಣ ವಿಭಾಗ | ಡಾ॥ ಹಸೀನ್ ತಾಜ್, ಪ್ರಾಧ್ಯಾಪಕರು (ಅವರು ನಿವೃತ್ತಿಯಾಗುವ ವರೆಗೆ) |
| 2. | ಪರಿಸರ ವಿಜ್ಞಾನ ವಿಭಾಗ | ಡಾ॥ ಬಿ.ಸಿ. ನಾಗರಾಜು, ಸಹ ಪ್ರಾಧ್ಯಾಪಕರು |
| 3. | ವಾಣಿಜ್ಯ ವಿಭಾಗ | ಡಾ॥ ಕೆ. ನಿರ್ಮಲ, ಸಹ ಪ್ರಾಧ್ಯಾಪಕರು |
| 4. | ಭೂಗರ್ಭಶಾಸ್ತ್ರ ವಿಭಾಗ | ಡಾ॥ ಪಿ.ಸಿ. ನಾಗೇಶ್, ಪ್ರಾಧ್ಯಾಪಕರು |
| 5. | ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗ, ಯುವಿಸಿಇ | ಡಾ॥ ಟಿ.ಎಸ್. ಪ್ರಸನ್ನ, ಪ್ರಾಧ್ಯಾಪಕರು |
| 6. | ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್ | ಡಾ॥ ಕೆ.ಬಿ. ರಾಜ, ಪ್ರಾಧ್ಯಾಪಕರು, (ಅವರು ನಿವೃತ್ತಿಯಾಗುವ ವರೆಗೆ) |
| 7. | ಎಲೆಕ್ಟ್ರಾನಿಕ್ ಮೀಡಿಯಾ (ಕೋ-ಆರ್ಡಿನೇಟರ್) | ಡಾ॥ ಟಿ. ಶ್ರೀಪತಿ, ಸಹಾಯಕ ಪ್ರಾಧ್ಯಾಪಕರು |
| 8. | ಪ್ರದರ್ಶನ ಕಲಾ ವಿಭಾಗ | ಡಾ॥ ಹಂಸಿನಿ ನಾಗೇಂದ್ರ, ಪ್ರಾಧ್ಯಾಪಕರು |

| | | |
|---|---|---|
| 9. | ರಾಜ್ಯಶಾಸ್ತ್ರ ವಿಭಾಗ | ಡಾ॥ ವೀಣಾ ದೇವಿ, ಪ್ರಾಧ್ಯಾಪಕರು, |
| 10. | ಗಣಿತಶಾಸ್ತ್ರ ವಿಭಾಗ | ಡಾ॥ ಹರಿಣಾ ಪಿ ವಾಗ್‌ಮೊರೆ, ಪ್ರಾಧ್ಯಾಪಕರು |
| 11. | ಅರ್ಥಶಾಸ್ತ್ರ ವಿಭಾಗ | ಡಾ॥ ಜಿ.ಎಲ್. ಪಾರ್ವತಮ್ಮ, ಪ್ರಾಧ್ಯಾಪಕರು, |
| 12. | ಮನಃಶಾಸ್ತ್ರ ವಿಭಾಗ | ಡಾ॥ ಎಂ. ಶ್ರೀನಿವಾಸ್, ಸಹ ಪ್ರಾಧ್ಯಾಪಕರು |
| 13. | ಸಮಾಜಕಾರ್ಯ ವಿಭಾಗ | ಡಾ॥ ಕೋದಂಡರಾಮ, ಪ್ರಾಧ್ಯಾಪಕರು (ದಿನಾಂಕ: 30-04-2021ರವರೆಗೆ/ವಯೋನಿವೃತ್ತಿ ಹೊಂದುವವರೆಗೆ)<br>ಡಾ॥ ವೇದಾ ಸಿ.ವಿ., ಸಹಾಯಕ ಪ್ರಾಧ್ಯಾಪಕರು, ದಿನಾಂಕ: 01-05-2021ರಿಂದ, ಇವರನ್ನು ಸದರಿ ವಿಭಾಗಕ್ಕೆ ಕೋ-ಆರ್ಡಿನೇಟರ್ ಆಗಿ ನೇಮಕಮಾಡಲು ಸಿಂಡಿಕೇಟ್ ನಿರ್ಣಯಿಸಿತು. |
| 14. | ಪ್ರಾಣಿಶಾಸ್ತ್ರ ವಿಭಾಗ | ಡಾ॥ ಮೆಹಬೂಬ್ ಪಾಷ, ಪ್ರಾಧ್ಯಾಪಕರು<br>ದಿನಾಂಕ: 01-05-2021ರಿಂದ ಜಾರಿಗೆ ಬರುವಂತೆ |
| 15. | ಅನ್ವಯಿಕ ತಳಿಶಾಸ್ತ್ರ (ಕೋ-ಆರ್ಡಿನೇಟರ್) | ಡಾ॥ ಎಸ್. ರಾಮಕೃಷ್ಣ, ಪ್ರಾಧ್ಯಾಪಕರು |

ಕುಲಪತಿಗಳು ಮುಂದುವರೆದು ಮಾತನಾಡಿ, ಯು.ವಿ.ಸಿ.ಇ. ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್ ವಿಭಾಗದಲ್ಲಿ, ಪ್ರಸ್ತುತ ಪ್ರಾಧ್ಯಾಪಕರು ಇರುವುದಿಲ್ಲ, ಆದಕಾರಣ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ॥ ಬಿ.ಪಿ. ಹರೀಶ್ ಇವರನ್ನು ಸೇವೆಯನ್ನು ತಾತ್ಕಾಲಿಕವಾಗಿ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್ ವಿಭಾಗಕ್ಕೆ ಮುಂದಿನ ಆದೇಶದವರೆಗೆ ವರ್ಗಾಯಿಸಬಹುದಾಗಿದೆ ಎಂದು ತಿಳಿಸಿದರು. ಇದು ಕೇವಲ ಆಂತರಿಕ ವ್ಯವಸ್ಥೆಯಾಗಿರುತ್ತದೆ ಎಂದು ತಿಳಿಸಿದರು.

ಚರ್ಚೆಯ ನಂತರ, ಡಾ॥ ಬಿ.ಪಿ. ಹರೀಶ್ ಇವರನ್ನು ಸೇವೆಯನ್ನು ತಾತ್ಕಾಲಿಕವಾಗಿ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್ ವಿಭಾಗಕ್ಕೆ ಮುಂದಿನ ಆದೇಶದವರೆಗೆ ವರ್ಗಾಯಿಸಲು ಸಿಂಡಿಕೇಟ್ ಅನುಮೋದಿಸಿತು.



**ವಿಷಯ ಸಂಖ್ಯೆ 51:** ಯು.ವಿ.ಸಿ.ಇ ಯಲ್ಲಿನ ವಿವಿಧ ವಿಭಾಗಗಳಲ್ಲಿ ಮೆಕ್ಯಾನಿಕ್ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಇನ್‌ಸ್ಟ್ರಕ್ಟರ್/ಫೋರ್‌ಮನ್ ಹುದ್ದೆಗೆ ಬಡ್ತಿ ನೀಡಲು ಇರುವ ವಂದ ಮತ್ತು ನೇಮಕಾತಿಗಳ ನಿಯಮಗಳನ್ನು ಪರಿಷ್ಕರಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

**ವಿಷಯ ಸಂಖ್ಯೆ 52:** ಅಭಿಮತದ ಆಯ್ಕೆ ಅನುಸಾರ ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಗೊಂಡಿರುವ ಬೋಧಕೇತರ ಸಿಬ್ಬಂದಿಗಳ ವರ್ಗಾವಣೆ ಕುರಿತು.

**ನಿರ್ಣಯ:**

ಬೆಂಗಳೂರು ವಿಶ್ವವಿದ್ಯಾಲಯದ ವಿಭಜನೆಯ ನಂತರ, ತಮ್ಮ ಹುದ್ದೆಯ ಧಾರಣಾಧಿಕಾರವನ್ನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಉಳಿಸಿಕೊಂಡು, ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಲ್ಪಟ್ಟ ಸಿಬ್ಬಂದಿಗಳ ಪೈಕಿ ಶ್ರೀಮತಿ ವಸಂತ ಕುಮಾರಿ, ಸಹಾಯಕರು ಮತ್ತು ಶ್ರೀ ಎನ್ ವೆಂಕಟೇಶ ಮೂರ್ತಿ, ಗ್ರೂಪ್ ಡಿ, ಇವರು ಪುನಃ ಬೆಂಗಳೂರು ವಿಶ್ವವಿದ್ಯಾಲಯದ ಸೇವೆಗೆ ಮರು–ವರ್ಗಾಯಿಸಲು ಸಲ್ಲಿಸಿರುವ ಅವರ ಮನವಿಯನ್ನು ಪರಿಗಣಿಸಿ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಸಚಿವರ ದಿನಾಂಕ: 12–06–2020 ಮತ್ತು 16–06–2020ರ ಪತ್ರಗಳ ಅನುಸಾರ ಅವರ ಸೇವೆಯನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 157h meeting of the Syndicate held on 24.03.2021*

**Item No 53:** Proceedings of the online 1st meeting of the Committee for acceptance and approval of the lowest tenders notified by the Engineering Division, Bangalore University held on 18th January-2021.

***Resolution:***

Sri M Udaya Kumar M, sought to know the action taken on the repair of UVCE Hostels at Central College Campus. He urged to change the Chief Warden of the UVCE Boys Hostel immediately. Further, he informed that for some of the works listed in the agenda note, the tenderer has quoted below 20% of the S.R. Rate. In case, the work is allotted for such tenderer the quality of work will be low. He urged not to encourage such contractors.

The Registrar said that as per KTPP Act, standard tender document procedures, the tenderer is required to deposit the difference of the amount of Tendered Amount and below S.R. rates quoted by him before commencement of work.

Sri Prem Sohanlal and Sri Videya Belagode Srikanta informed not to deduct the discount amount from the bills submitted by the contractors as it causes hardship to the contractors and also this practice leads to compromising quality in work. Dr. Govindaraju urged to prioritize the list of the civil works to be carried out to enable to take up works in a phased manner. Sri Gopinath opined that third party inspection may be obtained before making final payment of bills to contractors and proceedings may be approved as some of the works are in urgent in nature.

***Resolution:***

With the above discussion, the Syndicate resolved to approve the proceedings of the on-line 1st meeting of the Committee for acceptance and approval of lowest tenders by the Engineering Division of the University held on 18th January 2021.



**ವಿಷಯ ಸಂಖ್ಯೆ 54:** ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಶಿಕ್ಷಕರ ಸಂಘಕ್ಕೆ ಮಾನ್ಯತೆ ನೀಡುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ 55:** ಎನ್.ಎಂ.ಕೆ.ಆರ್.ವಿ ಮಹಿಳಾ ಕಾಲೇಜು (ಸ್ವಾಯತ್ತ) ಇಲ್ಲಿನ ಸಂಶೋಧನಾ ಕೇಂದ್ರದ ರಸಾಯನಶಾಸ್ತ್ರಕ್ಕೆ ಪುರುಷ ವಿದ್ಯಾರ್ಥಿಗಳನ್ನು ಪ್ರವೇಶಾತಿ ಪಡೆಯುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

**ವಿಷಯ ಸಂಖ್ಯೆ 56:** ಬೆಂಗಳೂರು ವಿಶ್ವವಿದ್ಯಾಲಯದ ಅಭಿಯಂತರರ ಕಛೇರಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಹಾಯ ಇಂಜಿನಿಯರ್ (ಸಿವಿಲ್) ಮತ್ತು ಕಿರಿಯ ಇಂಜಿನಿಯರ್ (ಎಲೆಕ್ಟ್ರಿಕಲ್) ರವರ ಸೇವೆಯನ್ನು ಹಾಗೂ ಯು.ವಿ.ಸಿ.ಇ ಕಟ್ಟಡ ದುರಸ್ತಿ ಕಾಮಗಾರಿಗಳ ಉಸ್ತುವಾರಿ ನೋಡಿಕೊಳ್ಳುತ್ತಿರುವ ಸೈಟ್ ಇಂಜಿನೀಯರ್ ಆದ ಶ್ರೀ ಎನ್. ಭಾಸ್ಕರ್ ರವರುಗಳ ಸೇವೆಯನ್ನು ಮುಂದುವರೆಸುವ ಬಗ್ಗೆ.

ಶ್ರೀ ಪ್ರೇಮ್ ಸೋಹನ್ ಲಾಲ್ ಮತ್ತು ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ ಅವರುಗಳು ಮಾತನಾಡಿ, ಯು.ವಿ.ಸಿ.ಇ.ಗೆ ಸಹಾಯಕ ಇಂಜಿನಿಯರ್/ ಕಿರಿಯ ಇಂಜಿನಿಯರ್ (ಸಿವಿಲ್)ಗೆ ಮಂಜೂರಾದ ಹುದ್ದೆ ಇರುವುದಿಲ್ಲ. ಆದರೂ ಕೂಡ ಶ್ರೀ ಎನ್. ಭಾಸ್ಕರ್ ಅವರನ್ನು ಸೈಟ್ ಇಂಜಿನಿಯರ್ ಆಗಿ ನೇಮಕ ಮಾಡಿಕೊಳ್ಳಲಾಗಿದೆ. ಸಿಂಡಿಕೇಟ್ ಸದಸ್ಯರು ಭೇಟಿ ನೀಡಿದ ಸಂದರ್ಭದಲ್ಲಿ ಇವರು ಯು.ವಿ.ಸಿ.ಇ. ಕಾಮಗಾರಿ ನಡೆಸುತ್ತಿರುವ ಸೈಟ್‌ನಲ್ಲಿ ಹಾಜರಿರುವುದಿಲ್ಲ. ಇಂಜಿನಿಯರಿಂಗ್ ವಿಭಾಗದಲ್ಲಿ ನೇಮಕಗೊಂಡ ಇತರ ಸಹಾಯಕ ಅಭಿಯಂತರರಿಗೆ ರೂ.30,000/- ವೇತನ ನೀಡುತ್ತಿದ್ದು, ಇವರಿಗೆ ರೂ.55,000/- ವೇತನ ನೀಡುತ್ತಿರುವುದು ಸರಿಯಾದ ಕ್ರಮವಲ್ಲ. ಆದ್ದರಿಂದ ಇವರನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಳಿಸಬೇಕೆಂದು ಆಗ್ರಹಿಸಿದರು. ವಿಶ್ವವಿದ್ಯಾಲಯದ ಅಭಿಯಂತರ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಹಾಯಕ ಇಂಜಿನಿಯರ್ ಹಾಗೂ ಕಿರಿಯ ಇಂಜಿನಿಯರ್‌ಗಳ ವೇತನವನ್ನು ಹೆಚ್ಚಿಸಬೇಕೆಂದು ತಿಳಿಸಿದರು. ಶ್ರೀ ಎನ್. ಭಾಸ್ಕರ್ ಅವರ ವಿಷಯದಲ್ಲಿ ಶ್ರೀ ಗೋಪಿನಾಥ್ ಅವರು ಮಾತನಾಡಿ, ಈ ವಿಷಯದ ಬಗ್ಗೆ ವಿವರವಾದ ಟಿಪ್ಪಣಿಯನ್ನು ಮುಂದಿನ ಸಿಂಡಿಕೇಟ್ ಮುಂದೆ ಮಂಡಿಸಬೇಕೆಂದು ತಿಳಿಸಿದರು. ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಅವರ ಸೇವೆ 29-10-2020ರಂದು ಕೊನೆಗೊಂಡಿದ್ದು, ಈಗಾಗಲೇ 5 ತಿಂಗಳು ಕಾರ್ಯ ನಿರ್ವಹಿಸಿದ್ದಾರೆ. ಆದಕಾರಣ ಅವರ ಸೇವೆಯನ್ನು ಮುಂದಿನ ಬಾರಿ ಮುಂದುವರೆಸುವಾಗ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ ಎಂದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ಪ್ರಸ್ತಾವನೆಯಲ್ಲಿ ನಮೂದಿಸಿರುವ ಸಹಾಯಕ ಅಭಿಯಂತರರು/ ಕಿರಿಯ ಅಭಿಯಂತರರು/ ಸೈಟ್ ಇಂಜಿನಿಯರ್ ಅವರ ಸೇವೆಯನ್ನು, ಅವರುಗಳ ಸೇವೆ ಕೊನೆಗೊಂಡ ದಿನಾಂಕದಿಂದ ಮೂರು ದಿನಗಳ ಬಿಡುವು ನೀಡಿ ಮುಂದಿನ ಹನ್ನೊಂದು ತಿಂಗಳ ಅವಧಿಗೆ ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿ, ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿರುವ

ಅಭಿಯಂತರರ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಆರು ಜನ ಸಹಾಯಕ ಅಭಿಯಂತರರು/ಕಿರಿಯ ಅಭಿಯಂತರರ ವೇತನವನ್ನು ರೂ.5,000/-ಗಳನ್ನು ಹೆಚ್ಚಿಸಲು (ಶ್ರೀ ಎನ್. ಭಾಸ್ಕರ್ ಅವರನ್ನು ಹೊರತುಪಡಿಸಿ) ಮತ್ತು ಶ್ರೀ ಎನ್. ಭಾಸ್ಕರ್ ಅವರ ಸೇವೆಯನ್ನು ಜ್ಞಾನಭಾರತಿ ಆವರಣಕ್ಕೆ ವರ್ಗಾಯಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ 57:** 2020-21ನೇ ಸಾಲಿಗೆ ಲಾರ್ವಿನ್ ಇಂಟರ್‌ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಬೆಂಗಳೂರು ಇದರ ಸಂಯೋಜನೆಯನ್ನು ಸ್ವಯಂ ಮುಚ್ಚುವ ಕಾರಣ ರದ್ದು ಪಡಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ 58:** ಶ್ರೀ ರಾಕೇಶ್, ಪಿ.ಎಸ್ ದಿವಂಗತ ಶ್ರೀ ಪುಟ್ಟಸ್ವಾಮಿ, ಹಿರಿಯ ಸಹಾಯಕರು, ಶೈಕ್ಷಣಿಕ ವಿಭಾಗ-3 ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ 59:** ದಿನಾಂಕ 10.02.2021 ರಂದು ನಡೆದ ಕೇಂದ್ರ ಖರೀದಿ ಸಮಿತಿ ನಡಾವಳಿಯ ಅನುಮೋದನೆ ಕುರಿತು.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 10.02.2021 ರಂದು ನಡೆದ ಕೇಂದ್ರ ಖರೀದಿ ಸಮಿತಿ ನಡಾವಳಿಗಳನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ 60:** 2020-21ನೇ ಸಾಲಿನಿಂದ ಅಮಿತ ಬಿ.ಇಡಿ, ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

**ವಿಷಯ ಸಂಖ್ಯೆ 61:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಗೌರವಧನವನ್ನು ಹೆಚ್ಚಿಸುವ ಕುರಿತು.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ:05-01-2021ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಭಾಗಶಃ ಮಾರ್ಪಡಿಸಿ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಗೌರವಧನವನ್ನು ಜನವರಿ 2021ರಿಂದ ಜಾರಿಗೆ ಬರುವಂತೆ 2020-21ನೇ ಸಾಲಿನ ಉಳಿದ ಅವಧಿಗೆ ಕೆಳಕಂಡಂತೆ ಹೆಚ್ಚಿಸಲು ಸಿಂಡಿಕೇಟ್ ಅನುಮೋದಿಸಿತು.

1. ಎನ್.ಇ.ಟಿ/ಎಸ್.ಎಲ್.ಇ.ಟಿ/ಪಿ.ಹೆಚ್.ಡಿ. ವಿದ್ಯಾರ್ಹತೆಯುಳ್ಳ ಅತಿಥಿ ಉಪನ್ಯಾಸಕರುಗಳಿಗೆ, ಮಾಹೆಯಾನ ರೂ.49,920/-ಗಳನ್ನು ಮೀರದಂತೆ ಒಂದು ಗಂಟೆಯ ಪ್ರವಚನವೊಂದಕ್ಕೆ ರೂ.780/- ರಂತೆ.
2. ಎನ್.ಇ.ಟಿ/ಎಸ್.ಎಲ್.ಇ.ಟಿ/ಪಿ.ಹೆಚ್.ಡಿ. ವಿದ್ಯಾರ್ಹತೆ ಹೊಂದಿರದ ಅತಿಥಿ ಉಪನ್ಯಾಸಕರುಗಳಿಗೆ, ಮಾಹೆಯಾನ ರೂ.43,520/-ಗಳನ್ನು ಮೀರದಂತೆ ಒಂದು ಗಂಟೆಯ ಪ್ರವಚನವೊಂದಕ್ಕೆ ರೂ.680/- ರಂತೆ.

*Proceedings of the 157^h meeting of the Syndicate held on 24.03.2021*

**ವಿಷಯ ಸಂಖ್ಯೆ 62:** ದಿನಾಂಕ 16.02.2021 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡಾವಳಿಯ ಶಿಫಾರಸ್ಸಿನ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157^h meeting of the Syndicate held on 24.03.2021*

**ವಿಷಯ ಸಂಖ್ಯೆ 63:** ಬೆಂಗಳೂರು ವಿಶ್ವವಿದ್ಯಾಲಯದ 55ನೇ ಮಿನಿ ಘಟಿಕೋತ್ಸವದಲ್ಲಿ (ಉಪಸ್ಥಿತರಿರದ) ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪದವಿ ಪ್ರಧಾನ ಪಟ್ಟಿಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ 55ನೇ ಮಿನಿ ಘಟಿಕೋತ್ಸವದಲ್ಲಿ (ಉಪಸ್ಥಿತರಿರದ) ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು

ಸ್ವೀಕರಿಸಲಿರುವ ಅಭ್ಯರ್ಥಿಗಳ ಪದವಿ ಪ್ರಧಾನ ಪಟ್ಟಿಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ ಅಧ್ಯಾಯ 15 ಪರಿಚ್ಛೇದ 15.1ರ ಪ್ರಕಾರ ಪರಿಗಣಿಸಿ ಸಿಂಡಿಕೇಟ್ ಅನುಮೋದಿಸುವ ಬಗ್ಗೆ.



**ವಿಷಯ ಸಂಖ್ಯೆ 64:** ಶ್ರೀ ಮಲ್ಲಾರಾಧ್ಯ ಎಸ್. ಅಧೀಕ್ಷಕರು ಪರೀಕ್ಷಾ ವಿಭಾಗ, ಇವರ ಪತ್ನಿಯ ವೈದ್ಯಕೀಯ ವೆಚ್ಚವನ್ನು ಮರುಪಾವತಿ ಮಾಡುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157th meeting of the Syndicate held on 24.03.2021*

**ವಿಷಯ ಸಂಖ್ಯೆ 65:** ಡಾ. ಬಾಬು ಜಗಜೀವನ್ ರಾಮ್ ಅಧ್ಯಯನ ಕೇಂದ್ರದ ಸ್ಥಾಪನೆ ಸಂಬಂಧಪಟ್ಟಂತೆ ಕರಡು ಪರಿನಿಯಮಾವಳಿಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157th meeting of the Syndicate held on 24.03.2021*

**Item No 66:** Constitution of a Committee for selection of candidates for award of Gold Medals and Prizes at the 56th Annual Convocation.

***Resolution:***

After detailed discussion, the Syndicate resolved to approve the constitution of a Committee for selection of candidates for award of Gold Medals and Prizes at the 56th Annual Convocation of Bangalore University and to nominate Prof. T.V. Raju on the Committee as a Member from the Syndicate.

*Proceedings of the 157th meeting of the Syndicate held on 24.03.2021*

**Item No 67:** Approval of the Memorandum of Understanding between Bangalore University and the Environmental Management & Policy Research Institute (EMPRI), Bangalore reg.

***Resolution:***

Deferred.

*Proceedings of the 157^h meeting of the Syndicate held on 24.03.2021*

**ವಿಷಯ ಸಂಖ್ಯೆ 68:** ಶ್ರೀ ಮನೋಹರ ಬಿ.ಕೆ ಗ್ರಾಮೀಣಾಭಿವೃದ್ಧಿ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಈ ವಿದ್ಯಾರ್ಥಿಯು ವೈದ್ಯಕೀಯ ವೆಚ್ಚದ ಬಿಲ್ಲನ್ನು ಸಲ್ಲಿಸಿರುವ ದಿನಾಂಕ 17.01.2020.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157^h meeting of the Syndicate held on 24.03.2021*

**Item No 69:** Approval for introduction of B.Sc., (Hons.) Agricultural skill and Entrepreneurship Programme at GPS Instituted of Agricultural Management under Section 66 (1) of KSU Act, 2000.

***Resolution:***

Deferred.

*Proceedings of the 157^h meeting of the Syndicate held on 24.03.2021*

**ವಿಷಯ ಸಂಖ್ಯೆ 70:** ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಪ್ರಸ್ತಾಪಿಸಿರುವ ಕಾಲೇಜುಗಳ ಸಂಯೋಜನೆಯ ಕುರಿತಂತೆ ಸಮಾನ ಕರಡು ಪರಿನಿಯಮಾವಳಿಯನ್ನು ವಿಶ್ವವಿದ್ಯಾಲಯ ವತಿಯಿಂದ ರೂಪಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157^h meeting of the Syndicate held on 24.03.2021*

**ವಿಷಯ ಸಂಖ್ಯೆ 71:** ಶ್ರೀ ಜಯಕುಮಾರ್ ಜಿ. ರೆಡ್ಡಿ, ಪ್ರಾಧ್ಯಾಪಕರು ದೃಶ್ಯಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರಿಗೆ ವಾರ್ಷಿಕ ವೇತನ ಬಡ್ತಿ ಮತ್ತು 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ಪರಿಷ್ಕರಿಸಿ ಮೂಲವೇತನವನ್ನು ನಿಗಧಿಪಡಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

**ವಿಷಯ ಸಂಖ್ಯೆ 72:** ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು/ಕಛೇರಿಗಳು ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಸೇವೆಯನ್ನು ಮುಂದುವರೆಸುವ ಬಗ್ಗೆ.

ಕುಲಸಚಿವರು ಮಾತನಾಡಿ, ಪ್ರಸ್ತುತ ಹೊರಗುತ್ತಿಗೆ ನೌಕರರ ಸೇವೆ ಪಡೆಯಲು ವಿಶ್ವವಿದ್ಯಾಲಯ ಅನುಸರಿಸುತ್ತಿರುವ ಕ್ರಮ ಸರ್ಕಾರದ ನೀತಿ ಮತ್ತು ಮಾರ್ಗಸೂಚಿಗಳಿಗನುಸಾರವಾಗಿಲ್ಲ. ಹೊರಗುತ್ತಿಗೆ ನೌಕರರ ಸೇವೆಯನ್ನು ಗುತ್ತಿಗೆದಾರ ಸಂಸ್ಥೆಯಿಂದ ಕಡೆಯಿಂದ ಪಡೆದುಕೊಳ್ಳಬೇಕಾಗಿದೆ. ಹಾಗೆ ಹೊರಗುತ್ತಿಗೆ ಸೇವೆ ಪಡೆಯುವಾಗ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಮಾತ್ರ ಪಡೆಯಬೇಕು. ಗುತ್ತಿಗೆದಾರ ಸಂಸ್ಥೆಯಿಂದ ಹೊರಗುತ್ತಿಗೆ ಸೇವೆ ಪಡೆದುಕೊಂಡು ಇ.ಎಸ್.ಐ. ಮತ್ತು ಪಿ.ಎಫ್. ನೀಡಿದ್ದಲ್ಲಿ ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ಒದಗಿಸಿದಂತಾಗುತ್ತದೆ, ಎಂದರು.

ಕುಲಪತಿಗಳು ಮಾತನಾಡಿ, ಇ.ಎಸ್.ಐ. ಮತ್ತು ಪಿ.ಎಫ್. ನೀಡಿದರೆ, ಮಾಹೆಯಾನ ಪ್ರತಿಯೊಬ್ಬರಿಗೆ ರೂ.22,000/-ಗಳ ವರೆಗೆ ಸಂಭಾವನೆ ನೀಡಬೇಕಾಗುತ್ತದೆ. ಪ್ರಸ್ತುತ 495 ಜನ ಹೊರಗುತ್ತಿಗೆ ನೌಕರರು ಕಾರ್ಯ ನಿರ್ವಹಿಸುತ್ತಿದ್ದು, ಇವರ ಸೇವೆಯು ದಿನಾಂಕ: 07-04-2021ಕ್ಕೆ ಕೊನೆಗೊಳ್ಳುವುದು. ಸದ್ಯಕ್ಕೆ ಇವರ ಸೇವೆಯನ್ನು ಒಂದು ಕಾರ್ಯನಿರತ ದಿನದ ಬಿಡುವು ನೀಡಿ ಮುಂದಿನ ಆರು ತಿಂಗಳ ಅವಧಿಗೆ ಮುಂದುವರೆಸಲು ಪ್ರಸ್ತಾವನೆಯನ್ನು ಮಂಡಿಸಲಾಗಿದೆ ಎಂದು ತಿಳಿಸಿದರು.

ಶ್ರೀ ವಿದೇಯ ಬೇಳಗೋಡೆ ಅವರು ಮಾತನಾಡಿ, ಹೊರಗುತ್ತಿಗೆ ನೌಕರರ ಅವರ ಸೇವಾ ಅನುಭವದ ಆಧಾರದ ವೇತನವನ್ನು ನಿಗದಿಪಡಿಸಬೇಕೆಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು/ಕಛೇರಿಗಳು ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಸೇವೆಯನ್ನು ದಿನಾಂಕ: 09-04-2021ರಿಂದ ಜಾರಿಗೆ ಬರುವಂತೆ ಮುಂದಿನ ಆರು ತಿಂಗಳುಗಳ ಅವಧಿಗೆ ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 157^h meeting of the Syndicate held on 24.03.2021*

**ವಿಷಯ ಸಂಖ್ಯೆ 73:** ವಿಶ್ವವಿದ್ಯಾಲಯದ ಸಂಪತ್ತಿ ವಿಭಾಗಕ್ಕೆ ಸಮಾರಂಭಗಳಿಗೆ ಊಟೋಪಚಾರ ಮತ್ತು ಇತರೆ ಕಛೇರಿ ಕೆಲಸಗಳಿಗೆ ಸುಸಜ್ಜಿತವಾದ ಸೌಕರ್ಯದ ಸೌಲಭ್ಯವುಳ್ಳ ವಾಹನ ಖರೀದಿಸುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 157^h meeting of the Syndicate held on 24.03.2021*

**ವಿಷಯ ಸಂಖ್ಯೆ 74:** ಕೆಂಗೇರಿ ಹೊರವರ್ತುಲ ರಸ್ತೆಯಲ್ಲಿರುವ ಉಲ್ಲಾಳ ಮುಖ್ಯರಸ್ತೆ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಮುಖ್ಯರಸ್ತೆಯ ಜಂಕ್ಷನ್‌ನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸುಪರ್ಧಿನಲ್ಲಿರುವ 6095.14 ಚಮೀ ವಿಸ್ತೀರ್ಣದ ಸರ್ಕಾರಿ ಗೋಮಾಳದ ಜಾಗವನ್ನು ಗ್ರೇಡ್ ಸಪರೇಟರ್ ಕಾಮಗಾರಿ ನಿರ್ಮಾಣ ಮಾಡಲು ಪಾಲಿಕೆಗೆ ಅನುಮತಿ ನೀಡುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಕೆಂಗೇರಿ ಹೊರವರ್ತುಲ ರಸ್ತೆಯಲ್ಲಿರುವ ಉಲ್ಲಾಳ ಮುಖ್ಯರಸ್ತೆ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಮುಖ್ಯರಸ್ತೆಯ ಜಂಕ್ಷನ್‌ನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸುಪರ್ಧಿನಲ್ಲಿರುವ ಮಲ್ಲತ್ತಹಳ್ಳಿ ಗ್ರಾಮದ ರಿ.ಸ.ನಂ.39ರಲ್ಲಿ 2417.62 ಚ.ಮೀ. ಹಾಗೂ ರೀ.ಸ.ನಂ.40ರಲ್ಲಿ 3677.52 ಚ.ಮೀ. ಒಟ್ಟು 6095.14 ಚಮೀ ವಿಸ್ತೀರ್ಣದ ಸರ್ಕಾರಿ ಗೋಮಾಳದ ಜಾಗವನ್ನು ಗ್ರೇಡ್ ಸಪರೇಟರ್ ಕಾಮಗಾರಿ ನಿರ್ಮಾಣ ಮಾಡಲು ಕೆಳಕಂಡ ಷರತ್ತಿಗೊಳಪಟ್ಟು ನಿರ್ಮಾಣ ಮಾಡಲು, ಪಾಲಿಕೆಗೆ ಅನುಮತಿ ನೀಡಲು ಸಿಂಡಿಕೇಟ್ ನಿರ್ಣಯಿಸಿತು.

1. ಮೇಲ್ಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೊದಲು ಸದರಿ ಯೋಜನೆಗೆ ತೆರವುಗೊಳಿಸಬೇಕಾದ ವಿಶ್ವವಿದ್ಯಾಲಯದ ಹತ್ತು ವಸತಿ ಗೃಹಗಳನ್ನು ಬೆಂಗಳೂರು ವಿಶ್ವವಿದ್ಯಾಲಯದವರು ತೋರಿಸಿದ ಜಾಗದಲ್ಲಿ ಪಾಲಿಕೆಯ ಸ್ವಂತ ಖರ್ಚಿನಿಂದ ನಿರ್ಮಿಸಿಕೊಡತಕ್ಕದ್ದು. ಪುನರ್ ವಸತಿ ಗೃಹಗಳ ನಿರ್ಮಾಣ ಪೂರ್ಣಗೊಂಡನಂತರ ಪ್ರಸ್ತುತ ವಸತಿ ಗೃಹಗಳನ್ನು ತೆರವುಗೊಳಿಸತಕ್ಕದ್ದು.
2. ದೇವಸ್ಥಾನ ಕಟ್ಟಡಕ್ಕೆ ಯಾವುದೇ ಹಾನಿಯಾಗದಂತೆ ಖಾಲಿ ಇರುವ ಜಾಗವನ್ನು ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ತೆರವುಗೊಳಿಸಬೇಕಾದ ದೇವಸ್ಥಾನ ಜಾಗದ ಕಾಂಪೌಂಡ್ ಕಟ್ಟಡವನ್ನು ಪಾಲಿಕೆ ವತಿಯಿಂದಲೇ ಪುನರ್ ನಿರ್ಮಾಣ ಮಾಡಿಕೊಡಬೇಕು.

**ವಿಷಯ ಸಂಖ್ಯೆ 75:** ಎನ್. ಎಂ.ಕೆ.ಆರ್.ವಿ ಮಹಿಳಾ ಕಾಲೇಜು, ಬೆಂಗಳೂರು ಇಲ್ಲಿ ಅಸ್ತಿತ್ವದಲ್ಲಿರುವ ಇಂಟಿಗ್ರೇಟೆಡ್ ಕೋರ್ಸುಗಳ ಸಂಯೋಜನಾ ನವೀಕರಣ ವಿಷಯದಲ್ಲಿ ಸ್ಥಳೀಯ ವಿಚಾರಣಾ ಸಮಿತಿಯವರು ಸಲ್ಲಿಸಿರುವ ವರದಿಯನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯನಂತರ, ಎನ್. ಎಂ.ಕೆ.ಆರ್.ವಿ ಮಹಿಳಾ ಕಾಲೇಜು, ಬೆಂಗಳೂರು ಇಲ್ಲಿ ಅಸ್ತಿತ್ವದಲ್ಲಿರುವ ಇಂಟಿಗ್ರೇಟೆಡ್ ಕೋರ್ಸುಗಳ 2019–20/2020–21ನೇ ಸಾಲಿನ ಸಂಯೋಜನಾ ನವೀಕರಣ ವಿಷಯದಲ್ಲಿ ಸ್ಥಳೀಯ ವಿಚಾರಣಾ ಸಮಿತಿಯವರು ಸಲ್ಲಿಸಿರುವ ವರದಿಯನ್ನು ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 59(9)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.


**ವಿಷಯ ಸಂಖ್ಯೆ 76:** 2020–21ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಹಾಗೂ 2021–22ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಪರಿಶೀಲನೆಗೆ ಹಾಗೂ ಅನುಮೋದಿಸುವ ಬಗ್ಗೆ.

ಮೇಲ್ಕಂಡ ವಿಷಯವನ್ನು ವಿಷಯ ಸೂಚಿ ಸಂಖ್ಯೆ: 22ರೊಂದಿಗೆ ಚರ್ಚೆಗೆ ತೆಗೆದುಕೊಳ್ಳಲಾಯಿತು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ವಿತ್ತಾಧಿಕಾರಿಯವರು, 2020–21ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಹಾಗೂ 2021–22ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸಭೆಗೆ ಪ್ರಾತ್ಯಕ್ಷಿಕೆ ಮೂಲಕ ವಿವರಸಿದರು. ಕರ್ನಾಟಕ ಸರ್ಕಾರವು 2021–22ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಆಯವ್ಯಯದಲ್ಲಿ ಈ ಕೆಳಕಂಡಂತೆ ಅನುದಾನ ಒದಗಿಸಿರುವುದಾಗಿ ತಿಳಿಸಿದರು:

| | | |
|---|---|---|
| 1) | ವೇತನ ಬಾಬ್ತು | ರೂ.13,401.00 ಲಕ್ಷಗಳು |
| 2) | ವಿಶ್ರಾಂತಿ/ಪಿಂಚಣಿ ಬಾಬ್ತು | ರೂ.1,523.00 ಲಕ್ಷಗಳು |
| | ಒಟ್ಟು | **ರೂ.14,924.00 ಲಕ್ಷಗಳು** |

2021–22ನೇ ಸಾಲಿಗೆ, ಅಭಿವೃದ್ಧಿ ಅನುದಾನ, ಎಸ್.ಸಿ.ಪಿ ಮತ್ತು ಟಿ.ಎಸ್.ಪಿ. ಯೋಜನೆಯಡಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಯಾವುದೇ ಅನುದಾನ ಹಂಚಿಕೆ ಮಾಡಿರುವುದಿಲ್ಲ. ಸರ್ಕಾರಕ್ಕೆ ಪಿಂಚಣಿಗಾಗಿ ಮತ್ತು ನಿವೃತ್ತಿ ಸಮಯದಲ್ಲಿ ನೀಡಬೇಕಾದ ಡಿ.ಸಿ.ಆರ್.ಜಿ. ಮತ್ತು ಸಿ.ವಿ.ಪಿ.ಗಳಿಗೆ ಸಂಬಂಧಿಸಿದಂತೆ, 2021–22ನೇ ಸಾಲಿಗೆ ರೂ.8800.00 ಲಕ್ಷಗಳ ಅನುದಾನದ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಸರ್ಕಾರವು ಪಿಂಚಣಿಗೆ ರೂ.1523.00 ಲಕ್ಷಗಳನ್ನು ಮಾತ್ರ ಮಂಜೂರು

ಮಾಡಿರುವುದರಿಂದ, ರೂ.7277.00 ಲಕ್ಷಗಳು ವ್ಯತ್ಯಾಸದ ಅನುದಾನವನ್ನು ಒದಗಿಸಲು ಸರ್ಕಾರಕ್ಕೆ ಕೋರಲಾಗುವುದು. 2021-22ನೇ ಸಾಲಿನ ಆಯವ್ಯಯ ಅಂದಾಜಿಗೆ ಸರ್ಕಾರ ಹಂಚಿಕೆ ಮಾಡಿರುವ ಹಣವನ್ನು ಸೇರಿಸಿ, ವಿಶ್ವವಿದ್ಯಾಲಯದ ಒಟ್ಟು ಪಾವತಿಗಳು ರೂ.57621.58 ಲಕ್ಷಗಳು ಹಾಗೂ ರೂ.55175.42 ಲಕ್ಷಗಳು ಸ್ವೀಕೃತಿಗಳಾಗಿದ್ದು, ರೂ.2446.16 ಲಕ್ಷಗಳ ಕೊರತೆಯಾಗಿರುತ್ತದೆ ಎಂದು ತಿಳಿಸಿದರು.

ಡಾ॥ ಗೋವಿಂದರಾಜು ಅವರು ಮಾತನಾಡಿ, ಪ್ರತಿ ವಿಭಾಗದಲ್ಲಿ ಸ್ಮಾರ್ಟ್ ಕ್ಲಾಸ್ ಸೌಲಭ್ಯ ಒದಗಿಸಲು, ಒಂದು ರಾಷ್ಟ್ರೀಯ ಮಟ್ಟದ ಸಮ್ಮೇಳನ ಮತ್ತು ಒಂದು ಅಂತರ್-ರಾಷ್ಟ್ರೀಯ ಮಟ್ಟದ ಸಮ್ಮೇಳನ, ಹಾಸ್ಟೆಲ್‌ಗಳಲ್ಲಿ ಕಂಪ್ಯೂಟರ್ ಸೆಂಟರ್ ಮತ್ತು ಲೈಬ್ರರಿ, ಯೋಗ ಅಧ್ಯಯನ ಕೇಂದ್ರಕ್ಕೆ ಪ್ರತ್ಯೇಕ ಕಟ್ಟಡ ನಿರ್ಮಾಣ, ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಕೌಶಲ್ಯಾಭಿವೃದ್ಧಿಗೆ ಹಾಗೂ ಹೊಸ ಯೋಜನೆಗಳಾದ ಡಾ॥ ಹೆಚ್.ನರಸಿಂಹಯ್ಯ ಅವರ ಹೆಸರಿನಲ್ಲಿ ಉತ್ತಮ ಸಂಶೋಧನಾ ಪ್ರಶಸ್ತಿಯನ್ನು ನೀಡಲು ಮತ್ತು ಪ್ರತಿ ವಿಭಾಗದ ಶಿಕ್ಷಕರಿಗೆ ಒಂದು Minor Research Project ಹಾಗೂ Major Research Project ಮಂಜೂರು ಮಾಡಲು 2021-22ನೇ ಸಾಲಿನ ಆಯ-ವ್ಯಯದಲ್ಲಿ ಹಣವನ್ನು ಮೀಸಲಿರಿಸಲು ಕೋರಿದರು.

ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಅಧ್ಯಯನ ವಿಭಾಗಗಳ ಕೊಠಡಿಗಳನ್ನು ಸ್ಮಾರ್ಟ್ ಕ್ಲಾಸ್ ಆಗಿ ಮೇಲ್ದರ್ಜೆಗೆ ಏರಿಸಲು, ಕೌಶಲ್ಯಾಭಿವೃದ್ಧಿ ಕೇಂದ್ರ ಹಾಗೂ ಇನ್‌ಕ್ಯುಬೇಷನ್ ಸೆಂಟರ್ ಅನ್ನು ಪ್ರಾರಂಭಿಸಲು ಆಯ-ವ್ಯಯದಲ್ಲಿ ಪ್ರತ್ಯೇಕ ಶೀರ್ಷಿಕೆ ಕಲ್ಪಿಸುವುದು ಎಂದರು. ಪ್ರೊ. ಬಿ.ಸಿ. ಮೈಲಾರಪ್ಪ, ಡಾ॥ ಸುಧಾಕರ ಹೆಚ್, ಶ್ರೀ ಉದಯ ಕುಮಾರ್ ಎಂ, ಅವರುಗಳು ಮಾತನಾಡಿ, ವಿಶ್ವವಿದ್ಯಾಲಯದ ವಿಭಾಗಗಳಲ್ಲಿ ಅಧ್ಯಯನ ಮಾಡುತ್ತಿರುವ ಬಹುತೇಕ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದಿಂದ ಬಂದವರಾದ್ದರಿಂದ Central English Language Lab ಪ್ರಾರಂಭಿಸಲು, ಎಲ್ಲಾ ಹಾಸ್ಟೆಲ್‌ನಲ್ಲಿ ಕಂಪ್ಯೂಟರ್ ಸೆಂಟರ್ ಹಾಗೂ ಗ್ರಂಥಾಲಯವನ್ನು ಪ್ರಾರಂಭಿಸಬೇಕೆಂದು ಹಾಗೂ ಅಗತ್ಯ ಅನುದಾನವನ್ನು ಆಯ-ವ್ಯಯದಲ್ಲಿ ಮೀಸಲಿರಿಸಬೇಕೆಂದು ಕೋರಿದರು. ಪ್ರೊ. ಬಿ.ಸಿ. ಮೈಲಾರಪ್ಪ, ಅವರು ಮುಂದುವರೆದು ಮಾತನಾಡಿ, ಮಲ್ಲತ್‌ಹಳ್ಳಿಯ ಹತ್ತಿರ ಇರುವ ರಿಂಗ್ ರಸ್ತೆಗೆ ಹೊಂದಿಕೊಡಿರುವ ಜಾಗದಲ್ಲಿ ವಿಶ್ವವಿದ್ಯಾಲಯದ ವತಿಯಿಂದ ಶಾಪಿಂಗ್ ಕಾಂಪ್ಲೆಕ್ಸ್ ಅನ್ನು ಕಟ್ಟಿಸಿದಲ್ಲಿ ಹೆಚ್ಚಿನ ಅನುದಾನ ಕ್ರೋಢಿಕರಿಸಬಹುದು ಎಂದು ಸಲಹೆ ನೀಡಿದರು.

ಶ್ರೀ ಗೋಪಿನಾಥ್ ಅವರು ಮಾತನಾಡಿ, 1) ಪ್ಲೇಸ್ಮೆಂಟ್ ಸೆಲ್ ಅಭಿವೃದ್ಧಿ, 2) ಐ.ಎ.ಎಸ್./ಕೆ.ಎ.ಎಸ್. ಪರೀಕ್ಷಾ ತರಬೇತಿ ಕೇಂದ್ರವನ್ನು ಬಲಪಡಿಸುವುದಕ್ಕೆ 3) ವಿದ್ಯಾರ್ಥಿಗಳಿಗೆ

ಪ್ರಶಸ್ತಿ/ಪುರಸ್ಕಾರ ಯೋಜನೆಗೆ, 4) ವಿದ್ಯಾರ್ಥಿಗಳು, ಇತರ ಕೌಶಲ್ಯಾಧಾರಿತ ವಿಷಯಗಳನ್ನು ಅಭ್ಯಾಸ ಮಾಡಲು ಕೇಂದ್ರೀಕೃತ ಕೌಶಲ್ಯಾಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲು, 5) ಜೂನ್-ಜುಲೈ 2021ರಲ್ಲಿ ಕ್ಯಾಂಪಸ್ ಸೆಲೆಕ್ಷನ್ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು 6) ಮಳೆ ನೀರು ಕುಯಿಲು ವ್ಯವಸ್ಥೆ ಹಾಗೂ 7) ಸ್ಪೋಕನ್ ಇಂಗ್ಲೀಷ್ ಕೋರ್ಸು ಮತ್ತು ಪ್ರೊಫೇಷನಲ್ ಸ್ಕಿಲ್ ಡೆವಲಪ್‌ಮೆಂಟ್ ನಡೆಸಲಿಕ್ಕೆ 2021-22 ಕನಿಷ್ಟ ರೂ.2.00 ಕೋಟಿಗಳನ್ನು ಮೀಸಲಿರಿಸಬೇಕೆಂದು ಕೋರಿದರು.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಪ್ರತಿ ವಿಭಾಗಗಳಲ್ಲಿ ಅಗತ್ಯವಾಗಿ ಬೇಕಾದ ಮೂಲ ಸೌಕರ್ಯಗಳ ವ್ಯವಸ್ಥೆ ಕಲ್ಪಿಸಲು ಕ್ರಮವಹಿಸಲು, ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅಗತ್ಯ ಅನುದಾನವನ್ನು ಒದಗಿಸಬೇಕೆಂದು ತಿಳಿಸಿದರು.

ಶ್ರೀ ಉದಯಕುಮಾರ್ ಎಂ, ಅವರು ಮಾತನಾಡಿ, ವಿಶ್ವವಿದ್ಯಾಲಯದ ಆವರಣದಲ್ಲಿ ಶುದ್ಧ ಕುಡಿಯುವ ನೀರಿನ (R.O.) ಘಟಕ ಸ್ಥಾಪಿಸಲು ಹಾಗೂ ಸಿಬ್ಬಂದಿಗಳಿಗೆ ವೈದ್ಯಕೀಯ ವಿಮೆ ಮಾಡಿಸುವ ಬಗ್ಗೆ ಅನುದಾನವನ್ನು ಒದಗಿಸಬೇಕೆಂದು ತಿಳಿಸಿದರು. ಡಾ॥ ಹಸೀನ್ ತಾಜ್ ಅವರು ಮಾತನಾಡಿ ವಿಭಾಗಳಿಗೆ ಹೊಸ ಪೀಠೋಪಕರಣಗಳನ್ನು ಒದಗಿಸಲು ಅನುದಾನವನ್ನು ಒದಗಿಸಬೇಕೆಂದು ಸಹ ತಿಳಿಸಿದರು.

ವಿತ್ತಾಧಿಕಾರಿಗಳು ಮಾತನಾಡಿ ಪೂರಕ ಆಯ-ವ್ಯಯಗಳನ್ನು ಮಾಡಲು ಅವಕಾಶವಿದೆ. ಸದಸ್ಯರುಗಳ ಸಲಹೆಗಳನ್ನು ಪರಿಗಣಿಸಬಹುದಾಗಿದೆ. ಸದಸ್ಯರುಗಳು ಮೇಲ್ಕಂಡ ಚಟುವಟಿಕೆ/ಅವಶ್ಯಕತೆಗಳ ಬಗ್ಗೆ ನಿಗದಿತವಾಗಿ ಬೇಕಾದ ಅಂದಾಜು ಮೊತ್ತಗಳ ವಿವರಗಳನ್ನು ಸಲ್ಲಿಸಿದರೆ, ಆಯ-ವ್ಯಯದಲ್ಲಿ ಅಳವಡಿಸಲು ಕ್ರಮವಹಿಸಲಾಗುವುದು ಮತ್ತು ಜ್ಞಾನಭಾರತಿ ಆಡಳಿತ ಕಛೇರಿಯಲ್ಲಿ ಮಹಿಳಾ ವಿಶ್ರಾಂತಿ ಕೊಠಡಿ ಅವಕಾಶ ಮಾಡಿದರೆ ಒಳಿತೆಂದು ತಿಳಿಸಿದರು.

**ನಿರ್ಣಯ:**

ಮೇಲ್ಕಂಡ ಚರ್ಚೆಯೊಂದಿಗೆ, 2020-21ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜು ಹಾಗೂ 2021-22ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 48(1 ಮತ್ತು 2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

## GENERAL DISCUSSIONS:-

ಸದಸ್ಯರುಗಳು, ಸಭಾಧ್ಯಕ್ಷರ ಅನುಮತಿಯೊಂದಿಗೆ ಕೆಳಕಂಡ ವಿಷಯಗಳ ಬಗ್ಗೆ ಪ್ರಸ್ತಾಪಿಸಿದರು:

1. ಶ್ರೀ ಪ್ರೇಮ್ ಸೋಹನ್ ಲಾಲ್ ಮತ್ತು ಡಾ॥ ಗೋವಿಂದರಾಜು ಅವರು ಮಾತನಾಡಿ, 156ನೇ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಪರಿಷ್ಕರಿಸಿ ಅಂದು ದಿನಾಂಕ: 20-02-2021ರಂದು ಜರುಗಿದ ಸಭೆಯಲ್ಲಿ ಸದಸ್ಯರುಗಳು ಚರ್ಚಿಸಿದಂತೆ ಸಿಂಡಿಕೇಟ್ ನಡಾವಳಿಗಳನ್ನು ಕಳುಹಿಸಿಕೊಡಬೇಕೆಂದು ತಿಳಿಸಿದರು ಹಾಗೂ ಸಿಂಡಿಕೇಟ್ ಸಭೆಯ ಕಲಾಪಗಳನ್ನು ವಿಡಿಯೋ ರೆಕಾರ್ಡಿಂಗ್ ಮಾಡಬೇಕೆಂದು ತಿಳಿಸಿದರು.

   ಕುಲಪತಿಗಳು ಉತ್ತರಿಸಿ, 156ನೇ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಪರಿಷ್ಕರಿಸಿ ಕಳುಹಿಸಿಕೊಡಲಾಗುವುದು. ವಿಡಿಯೋ ರೆಕಾರ್ಡಿಂಗ್ ಮಾಡುವ ಬಗ್ಗೆ ಮಾನ್ಯ ರಾಜ್ಯಪಾಲರ ಕಛೇರಿಯಿಂದ ಅನುಮತಿ ಕೋರುವುದಾಗಿ ತಿಳಿಸಿದರು.

2. ಶ್ರೀ ಪ್ರೇಮ್ ಸೋಹನ್ ಲಾಲ್ ಹಾಗೂ ಡಾ॥ ಗೋವಿಂದರಾಜು ಅವರು ಮಾತನಾಡಿ 156ನೇ ಸಿಂಡಿಕೇಟ್ ಸಭೆಯನ್ನು ಮುಂದೂಡಿದ್ದು, ಮತ್ತೆ ಇಂದು ಸಭೆ ಕರೆದಿರುವುದರಿಂದ ಈ ಸಭೆಯನ್ನು 156ನೇ ಮುಂದೂಡಿದ ಸಿಂಡಿಕೇಟ್ ಸಭೆ ಎಂದು ಪರಿಗಣಿಸಿ ಎಂದು ತಿಳಿಸಿದರು.

   ಕುಲಸಚಿವರು ಉತ್ತರಿಸಿ, 156ನೇ ಸಿಂಡಿಕೇಟ್ ಸಭೆಯಲ್ಲಿ ಮುಂದೂಡಿದ ವಿಷಯಗಳ ಜೊತೆಗೆ ಹೊಸದಾಗಿ ಅನೇಕ ವಿಷಯಗಳನ್ನು ಈ ಸಭೆಯ ಮುಂದೆ ಮಂಡಿಸಲಾಗಿದೆ. ಆದ್ದರಿಂದ ಈ ಸಭೆಯು ಮುಂದಿನ 157ನೇ ಸಿಂಡಿಕೇಟ್ ಸಭೆಯಾಗಿರುತ್ತದೆ ಎಂದು ತಿಳಿಸಿದರು.

3. ಡಾ॥ ಗೋವಿಂದರಾಜು ಅವರು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ನಡೆಯುವ ಚರ್ಚೆಯನ್ನು ಯಥಾವತ್ತಾಗಿ ದಾಖಲಿಸಬೇಕು ಹಾಗೂ ನಿರ್ಣಯದ ನಂತರ, ಚರ್ಚೆಯ ವಿವರಗಳನ್ನು ಹಾಗೂ ನಿರ್ಣಯವನ್ನು ಓದಿ ಹೇಳಬೇಕು ಎಂದು ತಿಳಿಸಿದರು.

   ಕುಲಸಚಿವರು ಉತ್ತರಿಸಿ ವಿಶ್ವವಿದ್ಯಾಲಯದ ಪರಿನಿಯಮಾವಳಿ 5.14ರ ಪ್ರಕಾರ ಸಭೆಯಲ್ಲಿ ವಿಷಯಗಳ ಬಗ್ಗೆ ನಡೆದ ಚರ್ಚೆಯ ನಂತರ ಅಂತಿಮವಾಗಿ ತೆಗೆದುಕೊಂಡ ನಿರ್ಣಯವನ್ನು ಅಲ್ಲೇ ದಾಖಲಿಸಬೇಕು ಹಾಗೂ ಸಿಂಡಿಕೇಟ್ ಸಭೆಗೆ ಅನುಮೋದನೆ ಕೋರಿ ಓದಿ ತಿಳಿಸತಕ್ಕದ್ದು ಎಂದಿದೆ. ಆದರೆ, ಚರ್ಚೆಯನ್ನು ಯಥಾವತ್ತಾಗಿ ಸಭೆಯಲ್ಲೇ ದಾಖಲಿಸುವುದು ಕಷ್ಟಸಾಧ್ಯ. ನಡಾವಳಿಗಳಲ್ಲಿ ಅವುಗಳನ್ನು ನಮೂದಿಸಲಾಗುತ್ತದೆ ಎಂದು ತಿಳಿಸಿದರು.

4. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಈ ಹಿಂದೆ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾಲಯದ ಎಲ್ಲಾ ಪಾವತಿಗಳನ್ನು ಸ್ವೀಕೃತಿಗಳನ್ನು ಎಸ್.ಬಿ.ಐ. ಬ್ಯಾಂಕ್ ಮೂಲಕ ನಿರ್ವಹಿಸಲು ನಿರ್ಣಯ ತೆಗೆದುಕೊಳ್ಳಲಾಗಿತ್ತು. ಆದರೂ ಕೂಡ, ಆಕ್ಸಿಸ್ ಬ್ಯಾಂಕ್ ಸೇವೆಯನ್ನು ಮುಂದುವರೆಸಲಾಗಿದೆ. ಈ ಆಕ್ಸಿಸ್ ಬ್ಯಾಂಕ್ ಶುಲ್ಕ ಸ್ವೀಕೃತಿಗಳನ್ನು ಏಳುದಿವಸಗಳನ್ನು ಮೀರಿ ವಿಶ್ವವಿದ್ಯಾಲಯದ ಎಸ್.ಬಿ.ಐ. ಖಾತೆಗೆ ವರ್ಗಾಯಿಸದೇ ಇರುವ ಬಗ್ಗೆ ಲೆಕ್ಕಪರಿಶೋಧಕರ ಆಕ್ಷೇಪಣೆ ಇದ್ದು, ಸರ್ಕಾರದಿಂದಲೂ ಸಹ ಪತ್ರ ಬಂದಿರುತ್ತದೆ. ಗೇಟ್ ವೇ ನಿರ್ವಹಣೆಗೆ ಸಂಬಂಧಿಸಿದಂತೆ ಮಾತ್ರ ಮೆ. ಇನ್‌ಹಾಕ್ ಸಂಸ್ಥೆಯ ಸೇವೆಯನ್ನು ಪಡೆಯಲಾಗಿತ್ತು. ಆದರೆ, ವಿಶ್ವವಿದ್ಯಾಲಯದ ಎಲ್ಲಾ ಕಾರ್ಯಗಳಿಗೂ ಇನಾಹಾಕ್ ಸಂಸ್ಥೆಯ ಸೇವೆಯನ್ನು ಪಡೆಯಲಾಗಿದೆ. ಸರ್ಕಾರಿ ಸಾಮ್ಯದ ಬ್ಯಾಂಕ್‌ಗಳಾದ ಯೂನಿಯನ್ ಬ್ಯಾಂಕ್ ಸಹ ಸೇವೆ ಒದಗಿಸಲು ಉತ್ಸುಕವಾಗಿದೆ. ಆದರೂ ಆಕ್ಸಿಸ್ ಬ್ಯಾಂಕ್ ಅನ್ನು ಮುಂದುವರೆಸಿರುವ ಬಗ್ಗೆ ಹಾಗೂ ಮೆ. ಇನಾಹಾಕ್ ಸಂಸ್ಥೆಯ ಸೇವೆಯನ್ನು ಪಡೆಯುತ್ತಿರುವ ಬಗ್ಗೆ ವಿವರಣೆ ನೀಡಲು ಕೋರಿದರು ಹಾಗೂ ಈ ಸಂಬಂಧ ಸಿಂಡಿಕೇಟ್ ಉಪಸಮಿತಿ ರಚಿಸಬೇಕೆಂದು ತಿಳಿಸಿದರು. ಡಾ॥ ಗೋವಿಂದರಾಜು ಅವರು ಮಾತನಾಡಿ, ವಿದ್ಯಾರ್ಥಿಗಳು ಎರಡು ಬಾರಿ ಶುಲ್ಕ ಪಾವತಿಸಿರುವ ನಿದರ್ಶನಗಳಿವೆ ಎಂದರು.

ಕುಲಪತಿಗಳು ಉತ್ತರಿಸಿ, 2017ರಲ್ಲಿ ಆನ್-ಲೈನ್ ಮೂಲಕ ಎಲ್ಲಾ ಸ್ವೀಕೃತಿಗಳನ್ನು ಪಡೆಯಬೇಕೆಂದು ನಿರ್ಣಯಿಸಿ, ವಿಶ್ವವಿದ್ಯಾಲಯವು ಆಕ್ಸಿಸ್ ಬ್ಯಾಂಕ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ಆ ಒಡಂಬಡಿಕೆಯನುಸಾರ ಏಳು ದಿನಗಳ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಸ್ವೀಕೃತಿಯನ್ನು ಎಸ್.ಬಿ.ಐ. ಬ್ಯಾಂಕ್‌ನಲ್ಲಿರುವ ವಿಶ್ವವಿದ್ಯಾಲಯದ ಖಾತೆಗೆ ಜಮಾ ಮಾಡಬೇಕು. ಲೆಕ್ಕಪರಿಶೋಧನಾ ಆಕ್ಷೇಪಣೆಯ ನಂತರ, ಏಳು ದಿನಗಳ ನಂತರ ವಿಶ್ವವಿದ್ಯಾಲಯದ ಖಾತೆಗೆ ಜಮೆ ಮಾಡಿರುವ ಅವಧಿಗೆ ಸಲ್ಲಬೇಕಾದ ವ್ಯತ್ಯಾಸದ ಬಡ್ಡಿ ಮೊತ್ತ ರೂ.3.49 ಲಕ್ಷಗಳನ್ನು ಆಕ್ಸಿಸ್ ಬ್ಯಾಂಕ್ ಪಾವತಿಸಿದೆ. ಸ್ವೀಕೃತಿ ಸಂಬಂಧ ಸೇವೆಯನ್ನು ಎಸ್.ಬಿ.ಐ.ಗೆ ವಹಿಸುವ ಬಗ್ಗೆ ಮೂರು ಬಾರಿ ಸಭೆ ನಡೆಸಿದ್ದು, ಈ ಬಗ್ಗೆ ಕುಲಸಚಿವರು(ಮೌಲ್ಯಮಾಪನ) ಅವರು ವಿವರಿಸುತ್ತಾರೆ ಎಂದು ತಿಳಿಸಿದರು.

ಕುಲಸಚಿವರು(ಮೌಲ್ಯಮಾಪನ) ಅವರು ಮಾತನಾಡಿ, ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಎಸ್.ಬಿ.ಐ. ಹಾಗೂ ಆಕ್ಸಿಸ್ ಬ್ಯಾಂಕ್‌ಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಸದರಿ ಸಭೆಯಲ್ಲಿ ಎಸ್.ಬಿ.ಐ. ಬ್ಯಾಂಕ್‌ನ ಪ್ರತಿನಿಧಿಯು ವಿಶ್ವವಿದ್ಯಾಲಯಕ್ಕೆ ಬರುವ ಸ್ವೀಕೃತಿಗಳ ಬಗ್ಗೆ

ಆರ್.ಬಿ.ಐ. ಮಾರ್ಗದರ್ಶಿಯ ಪ್ರಕಾರ ಶೇ2ರಷ್ಟರವರೆಗೆ ಸೇವಾ ಶುಲ್ಕ ವಿಧಿಸಲು ಅವಕಾಶವಿದೆ ಎಂದು ತಿಳಿಸಿದ್ದರು. ಆದರೆ, ಆಕ್ಸಿಸ್ ಬ್ಯಾಂಕ್‌ನವರು ಯಾವುದೇ ಸೇವಾ ಶುಲ್ಕ ವಿಧಿಸುತ್ತಿಲ್ಲ. ಆದರೆ, ಏಳು ದಿನಗಳ ಕಾಲ ಅವರ ಖಾತೆಯಲ್ಲಿ ಮೊತ್ತವನ್ನು ಉಳಿಸಿಕೊಳ್ಳುತ್ತಾರೆ. ಮೆ. ಇನ್‌ಹಾಕ್ ಸಂಸ್ಥೆಯು ಗೇಟ್‌ವೇ ಸರ್ವೀಸ್ ಚಾರ್ಜಸ್ ಶುಲ್ಕದ ಬಾಬ್ತು ಪ್ರತಿ ವಹಿವಾಟಿಗೆ ರೂ.15/– ಮೊತ್ತವನ್ನು ವಿಧಿಸುತ್ತಾರೆ. ಆದರೆ, ಬೇರೆ ಕಂಪನಿಯವರುಗಳು ಪ್ರತಿ ವಹಿವಾಟಿಗೆ ರೂ.100/–ವರೆಗೆ ಮೊತ್ತವನ್ನು ವಿಧಿಸುತ್ತಾರೆ ಎಂದು ತಿಳಿಸಿದರು.

ದೀರ್ಘ ಚರ್ಚೆಯ ನಂತರ, ಆಕ್ಸಿಸ್ ಬ್ಯಾಂಕ್ ಸೇವೆಯನ್ನು ಮುಂದುವರಿಸಬೇಕೆ ಅಥವಾ ಬೇಡವೆ ಎಂಬುದರ ಬಗ್ಗೆ ವರದಿ ನೀಡಲು ಕೆಳಕಂಡ ಸಮಿತಿಯನ್ನು ರಚಿಸಲು ಸಿಂಡಿಕೇಟ್ ನಿರ್ಣಯಿಸಿತು:

ಅ) ಕುಲಪತಿಯವರು
ಆ) ಕುಲಸಚಿವರು
ಇ) ಕುಲಸಚಿವರು (ಮೌಲ್ಯಮಾಪನ)
ಈ) ವಿತ್ತಾಧಿಕಾರಿಯವರು
ಉ) ಪ್ರೊ. ಟಿ.ವಿ. ರಾಜು
ಊ) ಶ್ರೀ ಪ್ರೇಮ್ ಸೋಹನ್ ಲಾಲ್
ಎ) ಕಾನೂನು ಸಲಹೆಗಾರರು/ಹಿರಿಯ ವಕೀಲರು
ಏ) ಲೆಕ್ಕಪರಿಶೋಧಕರು
ಐ) ಬಿಲ್ ಡೆಸ್ಕ್ ಪ್ರತಿನಿಧಿ

ಸಮಿತಿಯು ಒಂದು ತಿಂಗಳ ಒಳಗಾಗಿ ವರದಿಯನ್ನು ಸಲ್ಲಿಸಬೇಕೆಂದು ಸಿಂಡಿಕೇಟ್ ಸೂಚಿಸಿತು.

5. ಪಿ.ಹೆಚ್.ಡಿ. ಪ್ರವೇಶಾತಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಅರ್ಹತಾ ಅಂಕಗಳಿಗೆ ಶೇಕಡಾ 5ರಷ್ಟು ಹೆಚ್ಚುವರಿ ರಿಯಾಯಿತಿ ನೀಡಬೇಕು, ಈಗ ಮಾರ್ಚ್ 31, 2021ರಿಂದ ಆಯೋಜಿಸಿರುವ ಪಿ.ಹೆಚ್.ಡಿ. ಕೋರ್ಸ್ ವರ್ಕ್‌ಅನ್ನು ಮುಂದೂಡುವ ಬಗ್ಗೆ, 2ನೇ ಸುತ್ತಿನ ಪ್ರವೇಶ ಪ್ರಕ್ರಿಯೆಯನ್ನು ಆದಷ್ಟುಬೇಗ ಆಯೋಜಿಸುವ ಬಗ್ಗೆ, 2 ವರ್ಷಕ್ಕಿಂತ ಕಡಿಮೆ ಸೇವಾವಧಿ ಇರುವ ಎಲ್ಲಾ ಶಿಕ್ಷಕರುಗಳಿಗೆ ಅಭ್ಯರ್ಥಿಗಳನ್ನು ಆಯ್ಕೆಮಾಡಿಕೊಳ್ಳಲು ಅವಕಾಶ ಕಲ್ಪಿಸುವ ಬಗ್ಗೆ ಮತ್ತು ಪ್ರತಿ ಶಿಕ್ಷಕರಿಗೆ ಹೆಚ್ಚುವರಿಯಾಗಿ ಇಬ್ಬರು ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲು ಅವಕಾಶ ನೀಡಬೇಕೆಂದು ಸಿಂಡಿಕೇಟ್ ಸಭೆಗೆ ವಿದ್ಯಾರ್ಥಿಗಳು ಮನವಿ ಸಲ್ಲಿಸಿದರು.

ಮೇಲ್ಕಂಡ ವಿದ್ಯಾರ್ಥಿಗಳ ಮನವಿಯ ವಿಷಯದಲ್ಲಿ ಪ್ರೊ. ಜಿ.ಸಿ. ಮೈಲಾರಪ್ಪ ಅವರು ಮಾತನಾಡಿ, 2016ರ ವಿಶ್ವವಿದ್ಯಾಲಯದ ಪಿ.ಹೆಚ್.ಡಿ. ನಿಯಮಾವಳಿಗಳ ಕೆಲವೊಂದು ಉಪಬಂಧಗಳನ್ನು ತಪ್ಪಾಗಿ ರೂಪಿಸಲಾಗಿದೆ. ಮೈಸೂರು ಹಾಗೂ ಇತರ ವಿಶ್ವವಿದ್ಯಾಲಯಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಪಿ.ಹೆಚ್.ಡಿ. ಕೋರ್ಸಿನ ಪ್ರವೇಶಕ್ಕಾಗಿ, ಪಿ.ಹೆಚ್.ಡಿ. ಪ್ರವೇಶ ಪರೀಕ್ಷೆಯಲ್ಲಿ, ಶೇ45ನ್ನು ಕನಿಷ್ಠ ಅರ್ಹತಾ ಅಂಕಗಳನ್ನು ನಿಗದಿಪಡಿಸಿದೆ. ಆದರೆ, ನಮ್ಮ ವಿಶ್ವವಿದ್ಯಾಲಯವು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಶೇ50ನ್ನು ಕನಿಷ್ಠ ಅರ್ಹತಾ ಅಂಕವನ್ನಾಗಿ ನಿಗದಿಪಡಿಸಿರುವುದು ಸರಿಯಾದ ಕ್ರಮವಲ್ಲ. ಪಿ.ಹೆಚ್.ಡಿ. 2ನೇ ಸುತ್ತಿನ ಪ್ರವೇಶ ಪ್ರಕ್ರಿಯೆಯನ್ನು ಆದಷ್ಟು ಬೇಗ ಮುಗಿಸಲು ಕ್ರಮ ಕೈಗೊಳ್ಳಬೇಕು. ಮೊದಲ ಸುತ್ತಿನ ಪಿ.ಹೆಚ್.ಡಿ. ಪ್ರವೇಶಾತಿಗೆ ಹಾಜರಾಗದಿದ್ದ ಯಾವುದೇ ವಿದ್ಯಾರ್ಥಿಗಳಿಗೆ 2ನೇ ಸುತ್ತಿಗೆ ಅವಕಾಶ ನೀಡಬಾರದೆಂದು ತಿಳಿಸಿದರು.

ಡಾ॥ ಗೋವಿಂದರಾಜು ಅವರು ಮಾತನಾಡಿ, ಪಿ.ಹೆಚ್.ಡಿ. ಪ್ರವೇಶಾತಿಯ ಬಗ್ಗೆ ಪ್ರತ್ಯೇಕ ಅಜೆಂಡಾ ಅನ್ನು ಮಂಡಿಸಿ, ಪಿ.ಹೆಚ್.ಡಿ. ಪ್ರವೇಶಾತಿಗೆ ಎಸ್.ಎಲ್.ಇ.ಟಿ. ಪಠ್ಯಕ್ರಮವನ್ನು ನಿಗಧಿಪಡಿಸಿದ್ದು ಹಾಗೂ ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಬರೆಯಲು ಅನುಮತಿ ನೀಡಿರುವುದು ಸರಿಯಾದ ಕ್ರಮವಲ್ಲ. ಪಿ.ಹೆಚ್.ಡಿ. ನಿಯಮಾವಳಿಗಳಿಗೆ ತಿದ್ದುಪಡಿ ತರಬೇಕೆಂದು ತಿಳಿಸಿದರು.

ಡಾ॥ ಸುಧಾಕರ ಹೆಚ್, ಅವರು ಮಾತನಾಡಿ, ಪ್ರವೇಶ ಪರೀಕ್ಷೆ ನಡೆದು, 2 ವರ್ಷಗಳು ಕಳೆದರೂ ಪ್ರವೇಶಾತಿ ಪ್ರಕ್ರಿಯೆ ಪೂರ್ಣಗೊಂಡಿರುವುದಿಲ್ಲವೆಂದು ತಿಳಿಸಿದರು. ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಪಿ.ಹೆಚ್.ಡಿ. ವಿದ್ಯಾರ್ಥಿಗಳ ವಿದ್ಯಾರ್ಥಿಗಳ ಬಗ್ಗೆ ಒಂದು ಸಮಿತಿಯನ್ನು ರಚಿಸಬೇಕೆಂದು ತಿಳಿಸಿದರು.

ಚರ್ಚೆಯ ನಂತರ, ಪಿ.ಹೆಚ್.ಡಿ. ಪ್ರವೇಶ ಪ್ರಕ್ರಿಯೆಯಲ್ಲಿ ಮೊದಲ ಸುತ್ತಿನಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ, ಮಾರ್ಚ್ 31, 2021ರಿಂದ ಆಯೋಜಿಸಲಾಗಿರುವ ಕೋರ್ಸ್ ವರ್ಕ್ ಅನ್ನು ಮುಂದೂಡಲು ಸಿಂಡಿಕೇಟ್ ಸೂಚಿಸಿ, ಪಿ.ಹೆಚ್.ಡಿ. ಪ್ರವೇಶಾತಿಗೆ ಸಂಬಂಧಿಸಿದಂತೆ 2ನೇ ಸುತ್ತಿನ ಕೌನ್ಸೆಲಿಂಗ್ ನಡೆಸುವ ಬಗ್ಗೆ ಹಾಗೂ ವಿದ್ಯಾರ್ಥಿಗಳ ಮನವಿಯ ಬಗ್ಗೆ ಒಂದು ವಾರದೊಳಗಾಗಿ ವರದಿ ನೀಡಲು ಕೆಳಕಂಡ ಸಮಿತಿಯನ್ನು ರಚಿಸಲು ಸಿಂಡಿಕೇಟ್ ನಿರ್ಣಯಿಸಿತು:

ಅ) ಕುಲಪತಿಯವರು – ಅಧ್ಯಕ್ಷರು
ಆ) ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
ಇ) ಡಾ॥ ಸುಧಾಕರ ಹೆಚ್ – ಸದಸ್ಯರು
ಈ) ಡಾ॥ ಗೋವಿಂದರಾಜು – ಸದಸ್ಯರು
ಉ) ಪ್ರೊ. ಬಿ.ಸಿ. ಮೈಲಾರಪ್ಪ ಮತ್ತು ಎಲ್ಲಾ ಡೀನರುಗಳು – ಸದಸ್ಯರುಗಳು

6. ಶ್ರೀ ಗೋಪಿನಾಥ್ ಅವರು ಮಾತನಾಡಿ, ರಾಮನಗರ ಸ್ನಾತಕೋತ್ತರ ಕೇಂದ್ರಕ್ಕೆ 2 ಎಕರೆ ಜಮೀನು ಮಂಜೂರಾಗಿದ್ದು, ಈ ಮಂಜೂರಾದ ಜಮೀನನ್ನು ವಿಶ್ವವಿದ್ಯಾಲಯದ ಹೆಸರಿಗೆ ನೋಂದಣಿ ಮಾಡಿಸಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ತಿಳಿಸಿ, ಈ ಬಗ್ಗೆ ಪ್ರಗತಿಯನ್ನು ಪರಿಶೀಲಿಸಲು ಒಬ್ಬ ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡಬೇಕೆಂದು ಹಾಗೂ ಮುಂದಿನ ಸಿಂಡಿಕೇಟ್ ಸಭೆಗೆ ಮಾಹಿತಿ ನೀಡಬೇಕೆಂದು ಕೋರಿದರು.

ಚರ್ಚೆಯ ನಂತರ, ರಾಮನಗರ ಸ್ನಾತಕೋತ್ತರ ಕೇಂದ್ರಕ್ಕೆ ಮಂಜೂರಾಗಿರುವ 2 ಎಕರೆ ಜಮೀನನ್ನು ವಿಶ್ವವಿದ್ಯಾಲಯದ ಹೆಸರಿಗೆ ನೋಂದಣಿ ಮಾಡಲು ಕೂಡಲೇ ಕ್ರಮವಹಿಸಬೇಕೆಂದು ಸೂಚಿಸಿ, ಡಾ॥ ಸುಧಾಕರ ಹೆಚ್, ಇವರನ್ನು ಈ ವಿಷಯವಾಗಿ ಸಮನ್ವಯ ಸಾಧಿಸಲು ನಾಮ ನಿರ್ದೇಶನ ಮಾಡಲು ಸಿಂಡಿಕೇಟ್ ನಿರ್ಣಯಿಸಿತು.

7. ಡಾ॥ ಗೋವಿಂದರಾಜು ಅವರು ಮಾತನಾಡಿ, ತಾವು ಹಿಂದಿನ ಸಭೆಯಲ್ಲಿ ಅಲ್ಮೆರಾ ಖರೀದಿಗೆ ಸಂಬಂಧಿಸಿದಂತೆ ವಿಷಯ ಪ್ರಸ್ತಾಪಿಸಿದ್ದು, ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ, ಪ್ರೊ. ಟಿ.ವಿ. ರಾಜು ಮತ್ತು ಡಾ॥ ಗೋವಿಂದರಾಜು ಅವರನ್ನೊಳಗೊಂಡ ಸಮಿತಿಯು ಅಲ್ಮೆರಾ ಖರೀದಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ ವರದಿ ನೀಡಲು ತಿಳಿಸಿದರು.

8. ಶ್ರೀ ಉದಯ ಕುಮಾರ್ ಎಂ ಹಾಗೂ ಡಾ॥ ಸುಧಾಕರ ಹೆಚ್ ಅವರು ಮಾತನಾಡಿ ಶ್ರೀ ಎನ್. ಆಂಜಲಪ್ಪ ಅವರು ಕೋಲಾರ ಸ್ನಾತಕೋತ್ತರ ಕೇಂದ್ರದಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಶ್ರೀಮತಿ ಉಮಾದೇವಿ ಪ್ರಕರಣದ ನಿರ್ಣಯದಂತೆ 10–04–2006ಗೆ ಹತ್ತು ವರ್ಷ ಪೂರೈಸಿದ್ದಾರೆ. ವಿಶ್ವವಿದ್ಯಾಲಯ ಇತರೇ ಸಿಬ್ಬಂದಿಗಳನ್ನು ಖಾಯಮಾತಿ ಮಾಡುವಾಗ ಇವರ ಹೆಸರನ್ನು ಬಿಟ್ಟಿರುತ್ತಾರೆ. ಆದುದರಿಂದ ಇವರ ಖಾಯಮಾತಿಗೆ ಕ್ರಮವಹಿಸಬೇಕೆಂದು ಹಿಂದಿನ ಸಿಂಡಿಕೇಟ್

ಸಭೆಯಲ್ಲಿ ಪ್ರಸ್ತಾಪಿಸಿದ್ದರೂ ಈ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲವೆಂದು ತಿಳಿಸಿದರು.

ಚರ್ಚೆಯ ನಂತರ, ಮುಂದಿನ ಸಿಂಡಿಕೇಟ್ ಸಭೆಗೆ ವಿವರವಾದ ಪರಾಮರ್ಶಿತ ಟಿಪ್ಪಣಿಯನ್ನು ಈ ವಿಷಯವನ್ನು ಮಂಡಿಸಲು ಸಿಂಡಿಕೇಟ್ ಸೂಚಿಸಿತು.

9. ಶ್ರೀ ಗೋಪಿನಾಥ್ ಅವರು ಮಾತನಾಡಿ, ಮುಂದಿನ ಸ್ವಾತಂತ್ರ್ಯೋತ್ಸವ ಆಚರಣೆ ಬಗ್ಗೆ ಒಂದು ಸಮಿತಿಯನ್ನು ರಚಿಸಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಈ ವಿಷಯವಾಗಿ ಕಾಮಗಾರಿ ಸಮಿತಿಯ ಸಭೆಯಲ್ಲಿ ಚರ್ಚೆ ನಡೆದಿದ್ದು, ಕಾಮಗಾರಿ ಸಮಿತಿಯ ನಡಾವಳಿಗಳನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗುತ್ತಿದ್ದು, ಆ ಸಮಯದಲ್ಲಿ ಸೂಕ್ತವಾಗಿ ನಿರ್ಣಯ ತೆಗೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

10. ಡಾ॥ ಸುಧಾಕರ ಹೆಚ್ ಅವರು ಮಾತನಾಡಿ, ಬ್ಯಾಕ್ ಲಾಗ್ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯು ಅಪೂರ್ಣವಾಗಿದೆ. ಬಾಕಿ ಉಳಿದಿರುವ ಹುದ್ದೆಗಳಿಗೆ ನೇಮಕಾತಿಯನ್ನು ಆದಷ್ಟು ಪೂರ್ಣಗೊಳಿಸಬೇಕೆಂದು ಕೋರಿದರು.

ಕುಲಪತಿಗಳು ಉತ್ತರಿಸಿ, ಕೋವಿಡ್-19ರ ಆರ್ಥಿಕ ಮುಗ್ಗಟ್ಟಿನ ಕಾರಣ, ಯಾವುದೇ ನೇಮಕಾತಿಗಳನ್ನು 31 ಮಾರ್ಚ್ 2021ರ ವರೆಗೆ ಕೈಗೆತ್ತಿಕೊಳ್ಳಬಾರದೆಂದು ಸರ್ಕಾರ ಸೂಚಿಸಿದೆ. ಸರ್ಕಾರದಿಂದ ಅನುಮತಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

11. ಪ್ರೊ. ಬಿ.ಸಿ. ಮೈಲಾರಪ್ಪ ಅವರು ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಗುರುತಿಸಿದ್ದ ಪರಿಶಿಷ್ಟ ಜಾತಿಗೆ ಮೀಸಲಿದ್ದ 20 ಹಾಗೂ ಪರಿಶಿಷ್ಟ ಪಂಗಡಕ್ಕೆ ಮೀಸಲಿದ್ದ 35 ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿಮಾಡಲು ಜಾಹೀರಾತು ನೀಡಿ ಈಗಾಗಲೇ ನೇಮಕಾತಿ ಪ್ರಕ್ರಿಯೆ ನಡೆಸಲಾಗಿದೆ. ನೇಮಕಾತಿ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆ ಹೊರಡಿಸಿರುವ ಪರಿನಿಯಮಾವಳಿಯನುಸಾರ ವಯಸ್ಸು ಮತ್ತು ಮೆರಿಟ್ ಅನ್ನು ಪರಿಗಣಿಸಿರುವುದಿಲ್ಲವೆಂದು ಕೆಲವು ಅಭ್ಯರ್ಥಿಗಳು ಸಮಾಜ ಕಲ್ಯಾಣ ಇಲಾಖೆಗೆ ಮನವಿ ಸಲ್ಲಿಸಿದ್ದಾರೆ. ಡಾ॥ ಡಿ. ಪರಮೇಶ್ವರ್ ನಾಯಕ್ ಇವರು ಪರಿಸರ ವಿಜ್ಞಾನ ವಿಭಾಗಕ್ಕೆ ಸಹಾಯಕ ಪ್ರಾಧ್ಯಾಪಕ ಬ್ಯಾಕ್‌ಲಾಗ್ ಹುದ್ದೆಗೆ ಹಾಗೂ ಭೂಗರ್ಭಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಿದ್ದು, ಇವರ ಅರ್ಹತೆಯನ್ನು ಪರಿಗಣಿಸಬೇಕೆಂದು ನ್ಯಾಯಾಲಯದಿಂದ ಆದೇಶ ಪಡೆದಿದ್ದಾರೆ. ಡಾ॥ ಡಿ. ಪರಮೇಶ್ವರ್ ನಾಯಕ್ ಅವರು ಕಳೆದ ಇಪ್ಪತ್ತು ವರ್ಷಗಳಿಂದ ಪರಿಸರ

ವಿಜ್ಞಾನ ವಿಭಾಗದಲ್ಲಿ ಪೂರ್ಣಕಾಲಿಕ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಮೊದಲು ಸದರಿ ವಿಭಾಗದಲ್ಲಿ ಯುಜಿಸಿ 10ನೇ ಯೋಜನೆ ಅಡಿಯಲ್ಲಿ ನೇಮಕಾತಿ ಆದ ಸಂದರ್ಭದಲ್ಲಿ, ಇವರು ನೇಮಕಾತಿ ವಂಚಿತರಾಗಿದ್ದಾರೆ. ಈ ಬಗ್ಗೆ ಇವರ ವಿಷಯವಾಗಿ ಪರಿಶಿಷ್ಟ ಜಾತಿ/ಪಂಗಡ ಸದನ ಸಮಿತಿಯು ಇವರನ್ನು ನೇಮಕಾತಿ ನೀಡಬೇಕೆಂದು ನಿರ್ಣಯ ಕೈಗೊಂಡಿದೆ. ಈ ಬಗ್ಗೆ ಹಿಂದಿನ ಕುಲಪತಿಗಳು ಸದನ ಸಮಿತಿಗೆ ಅವರ ಸೇವೆಯನ್ನು ಸಕ್ರಮಗೊಳಿಸುವ ಬಗ್ಗೆ ಮುಚ್ಚಳಿಕೆ ಪತ್ರ ನೀಡಿದ್ದಾರೆ. ಪ್ರಸ್ತುತ ದಿನಾಂಕ: 23-03-2021ರ ಸರ್ಕಾರದ ಪತ್ರದಲ್ಲಿ ಇವರ ಸೇವಾ ಸಕ್ರಮಾತಿ ವಿಷಯ ಬ್ಯಾಕ್ ಲಾಗ್ ನೇಮಕಾತಿ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸರ್ಕಾರ ನಿರ್ದೇಶಿಸಿದೆ. ಡಾ॥ ಡಿ. ಪರಮೇಶ್ವರ್ ನಾಯಕ್ ಕಳೆದ 20 ವರ್ಷಗಳಿಂದ ಪೂರ್ಣಕಾಲಿಕ ಅತಿಥಿ ಉಪನ್ಯಾಸಕರಾಗಿ ಕೆಲಸ ನಿರ್ವಹಿಸಿರುವುದರಿಂದ, ಪ್ರಸ್ತುತ ಪರಿಸರ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಹತೆ ಇಲ್ಲವೆಂದು ಹೇಳುವುದು ಸರಿಯಾದ ಕ್ರಮವಲ್ಲ. ಆದ್ದರಿಂದ ಕೂಡಲೇ ನೇಮಕಾತಿ ಮಂಡಳಿ ಸಭೆ ನಡೆಸಿ ಇವರ ನೇಮಕಾತಿಗೆ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು.

ಕುಲಸಚಿವರು ಮಾತನಾಡಿ, ಕೆಲವು ವಿಭಾಗಗಳು interdisciplinary ವಿಷಯಗಳನ್ನು ಹೊಂದಿದ್ದು, ಕಳೆದ 20 ವರ್ಷಗಳಿಂದ ಪೂರ್ಣಕಾಲಿಕ ಅತಿಥಿ ಉಪನ್ಯಾಸಕರಾಗಿ ಪಾಠ ಪ್ರವಚನ ನಿರ್ವಹಿಸುತ್ತಿದ್ದವರಿಗೆ. ಈ ಹಂತದಲ್ಲಿ, ಅರ್ಹತೆ ಇರುವುದಿಲ್ಲ ಎಂದು ಪರಿಗಣಿಸುವುದು ಸರಿಯಾದ ಕ್ರಮವಲ್ಲವೆಂದು ತಿಳಿಸಿದರು.

ಡಾ॥ ಗೋವಿಂದರಾಜು ಅವರು ಮಾತನಾಡಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಈ ಹಿಂದೆ interdisciplinary ವಿಷಯಗಳ ಬಗ್ಗೆ ತತ್ಸಮಾನತೆಯ ಬಗ್ಗೆ ವರದಿ ನೀಡಿದೆ ಅದರಂತೆ ಕ್ರಮವಹಿಸಿ ಅವರ ಅರ್ಹತೆಯನ್ನು ಪರಿಗಣಿಸಬೇಕೆಂದು ತಿಳಿಸಿದರು.

ಇತರ ಸದಸ್ಯರುಗಳು ಸಹ ಡಾ॥ ಡಿ. ಪರಮೇಶ್ವರ್ ನಾಯಕ್ ಅವರ ಮನವಿಯನ್ನು ಪರಿಗಣಿಸಬಹುದಾಗಿದೆ ಎಂದು ತಿಳಿಸಿದರು.

ಕುಲಪತಿಗಳು ಮಾತನಾಡಿ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು, ಡೀನರು ಮತ್ತು ವಿಷಯ ಪರಿಣಿತರು ಅಭ್ಯರ್ಥಿಯ ಅರ್ಹತೆಯ ಬಗ್ಗೆ ಅವರ ಅಭಿಪ್ರಾಯ ದಾಖಲಿಸಬೇಕು. ಘನ ಉಚ್ಚನ್ಯಾಯಾಲಯದ ಆದೇಶದಂತೆ ಸಂದರ್ಶನಕ್ಕೆ ಕರೆಯಬಹುದಾಗಿದೆ ಎಂದು ತಿಳಿಸಿದರು.

ದೀರ್ಘ ಚರ್ಚೆಯ ನಂತರ, ಹಿಂದಿನ ಕುಲಪತಿಗಳು ಸದನ ಸಮಿತಿಯ ಮುಂದೆ ನೀಡಿರುವ ಮುಚ್ಚಳಿಕೆ ಪತ್ರದ ಹಾಗೂ ರಿಟ್ ಅರ್ಜಿ ಸಂಖ್ಯೆ:41953/2019ರಲ್ಲಿ ಘನ ಉಚ್ಚನ್ಯಾಯಾಲಯವು ಹೊರಡಿಸಿರುವ ದಿನಾಂಕ: 10-10-2019ರ ಮಧ್ಯಂತರ ತೀರ್ಪಿನನ್ವಯ ಮತ್ತು ಸರ್ಕಾರದ ಪತ್ರ ಸಂಖ್ಯೆ ಇಡಿ 7 ಯುಬಿವಿ 2020 ದಿನಾಂಕ: 23-03-2021ರಲ್ಲಿನ ನಿರ್ದೇಶನದನುಸಾರ ಡಾ॥ ಡಿ. ಪರಮೇಶ್ವರ್ ನಾಯಕ್ ಇವರನ್ನು ಸಂಬಂಧಿಸಿದ ನೇಮಕಾತಿ ಮಂಡಳಿಯ ಮುಂದೆ ಸಂದರ್ಶನಕ್ಕೆ ಹಾಜರಾಗಲು ಅನುಮತಿ ನೀಡಲು ನಿರ್ಣಯಿಸಿತು ಹಾಗೂ ಸಂಬಂಧಪಟ್ಟ ನೇಮಕಾತಿ ಮಂಡಳಿ ಸಭೆಯನ್ನು ಕೂಡಲೇ ಕರೆಯಲು ಸೂಚಿಸಿತು.

12. ಡಾ॥ ಗೋವಿಂದರಾಜು ಅವರು ಮಾತನಾಡಿ, ಇಂಗ್ಲೀಷ್ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ನೇಮಕಾತಿಯನ್ನು ರದ್ದುಗೊಳಿಸಿ ಕರ್ನಾಟಕ ಉಚ್ಚ ನ್ಯಾಯಾಲಯವು ಆದೇಶ ನೀಡಿರುವ ಕಾರಣ, ನೇಮಕಾತಿ ನಡಾವಳಿಯಲ್ಲಿರುವ ಮುಂದಿನ ಅಭ್ಯರ್ಥಿಗೆ ನೇಮಕಾತಿ ಆದೇಶ ನೀಡಬೇಕೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ, ನೇಮಕಾತಿ ಮಂಡಳಿಯ ಸಭೆಯನ್ನು ಹೊಸದಾಗಿ ಕರೆದು ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

13. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಕ್ಯಾಂಪಸ್ ಅಭಿವೃದ್ಧಿ ಸಮಿತಿಯ ನಡಾವಳಿಗಳನ್ನು ಅನುಮೋದಿಸಬೇಕೆಂದು ಕೋರಿದರು. ಕುಲಪತಿಗಳು ಮಾತನಾಡಿ, ಮುಂದಿನ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

14. ಶ್ರೀ ಗೋಪಿನಾಥ್ ಮತ್ತು ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ ಪರೀಕ್ಷಾ ಫಲಿತಾಂಶ ಪ್ರಕಟಣೆಗೊಂಡು ಸಾಕಷ್ಟು ತಿಂಗಳಾದರೂ ಅಂಕಪಟ್ಟಿಗಳು ಕಾಲೇಜುಗಳಿಗೆ ತಲುಪಿರುವುದಿಲ್ಲ. ಕೆಲವೊಂದು ಪ್ರಕರಣಗಳಲ್ಲಿ 2 ವರ್ಷಗಳಾದರೂ ಅಂಕಪಟ್ಟಿ ನೀಡಿರುವುದಿಲ್ಲ. ವಿದ್ಯಾರ್ಥಿಗಳು ಅವರ ಸಣ್ಣಪುಟ್ಟ ಸಮಸ್ಯೆಗಳಿಗೆ ಪ್ರತಿ ನಿತ್ಯ ಭೇಟಿ ನೀಡುವಂತೆ ಆಗಿದೆ. ಆದ್ದರಿಂದ ಅಂಕ್ಷಪಟ್ಟಿ ಸಮಸ್ಯೆಯನ್ನು ಬಗೆಹರಿಸಲು ಏಪ್ರಿಲ್ 5 ಮತ್ತು 6 ರಂದು ಸಭೆ ಅಥವಾ ಅದಲಾತ್ ನಡೆಸಿ, ಅಂಕಪಟ್ಟಿ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ವಹಿಸಬೇಕೆಂದು ಕೋರಿದರು. ಕುಲಸಚಿವರು(ಮೌಲ್ಯಮಾಪನ) ಅವರು ಮಾತನಾಡಿ, ಅಂಕಪಟ್ಟಿ ವಿತರಣೆ ಬಗ್ಗೆ ಈಗಾಗಲೇ ತೆಗೆದುಕೊಂಡಿರುವ ಕ್ರಮಗಳನ್ನು ವಿವರಿಸಿ, ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಕೂಡಲೇ ಅಗತ್ಯ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

**ಕುಲಪತಿಯವರು**